ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಮೇ 02, 2021

ಸಂಪುಟ : 47 ಸಂಚಿಕೆ : 362 ☎ 254736 ✆ 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com ✉ janathavani@mac.com




ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿ ಉಲ್ಲಂಘಿಸಿದವರನ್ನು ತಡೆದು, ಛೀಮಾರಿ ಹಾಕಿ ದಂಡ ವಸೂಲಿ ಮಾಡುತ್ತಿರುವ ಪೊಲೀಸರು.

# ಕೋವಿಶೀಲ್ಡ್ ಉತ್ಪಾದಕನಿಗೆ 'ಬೆದರಿಕೆ'

**ಹೆಂಡತಿ, ಮಕ್ಕಳೊಂದಿಗೆ ಬ್ರಿಟನ್‌ಗೆ ತೆರಳಿದ ಪೂನಾವಾಲಾ**

**ಭಾರತದ ಹೊರಗೆ ಲಸಿಕಾ ಉತ್ಪಾದನಾ ಕೇಂದ್ರಗಳನ್ನು ತೆರೆಯುವ ಸೂಚನೆ**

ಲಂಡನ್, ಮೇ 1 – ಮುಖ್ಯಮಂತ್ರಿಗಳು ಹಾಗೂ ಪ್ರಭಾವಿಗಳಿಂದ ತಮಗೆ 'ಬೆದರಿಕೆ' ಕರೆಗಳು ಬಂದಿದ್ದವು ಎಂದು ಹೇಳಿರುವ ಕೊವಿಶೀಲ್ಡ್ ಲಸಿಕೆ ಉತ್ಪಾದಿಸುವ ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಿಇಒ ಅದರ್ ಪೂನಾವಾಲಾ, ಮುಂದಿನ ದಿನಗಳಲ್ಲಿ ಬ್ರಿಟನ್‌ನಲ್ಲಿ ಲಸಿಕೆ ಉತ್ಪಾದನಾ ಘಟಕ ಆರಂಭಿಸುವ ಸುಳಿವು ನೀಡಿದ್ದಾರೆ.

ಪೂನಾವಾಲಾ ಅವರಿಗೆ ಇತ್ತೀಚೆಗಷ್ಟೇ ಕೇಂದ್ರ ಸರ್ಕಾರ 'ವೈ' ಹಂತದ ರಕ್ಷಣೆ ನೀಡಿತ್ತು. ಪ್ರಸಕ್ತ ಅವರು ಲಂಡನ್‌ನಲ್ಲಿದ್ದು, ಇನ್ನೂ ಸ್ವಲ್ಪ ಕಾಲ ಅಲ್ಲೇ ಇರುವುದಾಗಿ ಹೇಳಿದ್ದಾರೆ.

'ದಿ ಟೈಮ್ಸ್' ಪತ್ರಿಕೆಗೆ ಸಂದರ್ಶನ ನೀಡಿರುವ ಪೂನಾವಾಲಾ, ಭಾರತದಲ್ಲಿ ಹಲವು ಪ್ರಭಾವಿಗಳು ತಮಗೆ ಕೊವಿಶೀಲ್ಡ್ ಲಸಿಕೆ ಪೂರೈಸುವಂತೆ ಜೋರು ದನಿಯ ಕರೆ ಮಾಡುತ್ತಿದ್ದರು ಎಂದಿದ್ದಾರೆ.

ನಾನು ಲಂಡನ್‌ಗೆ ಪತ್ನಿ ಹಾಗೂ ಮಕ್ಕಳ ಜೊತೆ ಧಾವಿಸಲು ಇಂತಹ ಒತ್ತಡಗಳೇ ಪ್ರಮುಖ ಕಾರಣ ಎಂದು 40 ವರ್ಷದ ಉದ್ಯಮಿ ಹೇಳಿದ್ದಾರೆ.

ನಾನು ಆ ಪರಿಸ್ಥಿತಿ ಮತ್ತೆ ಎದುರಿಸಲು ಬಯಸುವುದಿಲ್ಲ. ಎಲ್ಲವೂ ನನ್ನ ಹೆಗಲ ಮೇಲೆ ಬಿದ್ದಿದೆ, ನಾನೊಬ್ಬನೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ ಎಂದವರು ತಿಳಿಸಿದ್ದಾರೆ.

ನನ್ನ ಕೆಲಸ ಮಾಡುವ ಸಂದರ್ಭದಲ್ಲಿ ಯಾರೋ ಒಬ್ಬರಿಗೆ ಲಸಿಕೆ ಪೂರೈಸಲು ಸಾಧ್ಯವಾಗದೇ ಹೋದರೆ, ಅವರೇನು ಮಾಡಬಹುದು ಎಂಬುದನ್ನು ಊಹಿಸಲು ಸಾಧ್ಯವಿಲ್ಲ ಎಂದು ಪೂನಾವಾಲಾ ಕಳವಳ ವ್ಯಕ್ತಪಡಿಸಿದ್ದಾರೆ.

ನಿರೀಕ್ಷೆ ಹಾಗೂ ದಾಳಿಕೋರತನ ನಿಜವಾಗಿಯೂ ಕಂಡರಿಯದಂಥದ್ದು. ನನಗೆ ಲಸಿಕೆ ದೊರೆಯಲೇ ಬೇಕು ಎಂದು ಎಲ್ಲರೂ ಭಾವಿಸಿದ್ದಾರೆ. ನನಗೂ ಮುಂಚೆ ಬೇರೆಯವರಿಗೆ ಲಸಿಕೆ ದೊರೆಯುವುದು (3ನೇ ಪುಟಕ್ಕೆ)

## ಭಾರತಕ್ಕೆ ತಲುಪಿದ 1.5 ಲಕ್ಷ ಸ್ಪುಟ್ನಿಕ್ ಲಸಿಕೆ



ಹೈದರಾಬಾದ್, ಮೇ 1 – ಹದಿನೆಂಟು ವರ್ಷ ಮೀರಿದ ಎಲ್ಲ ರೂ ಲಸಿಕೆ ಪಡೆಯಲು ಅವಕಾಶ ತೆರೆದ ಮೊದಲ ದಿನದಂದು ರಷ್ಯಾದ 'ಸ್ಪುಟ್ನಿಕ್ - ವಿ'ಯ 1.5 ಲಕ್ಷ ಲಸಿಕೆಗಳು ರಷ್ಯಾದಿಂದ ಭಾರತಕ್ಕೆ ಬಂದಿವೆ.

ಅಗತ್ಯ ಒಪ್ಪಿಗೆಗಳನ್ನು ಪಡೆದ ನಂತರ ಮುಂದಿನ ಕೆಲ ದಿನಗಳಲ್ಲಿ ಲಸಿಕೆ ನೀಡಲಾಗುವುದು ಎಂದು ಲಸಿಕೆ ಆಮದು ಮಾಡಿಕೊಂಡಿರುವ ಡಾ. ರೆಡ್ಡೀಸ್ ಲ್ಯಾಬೊರೇಟರಿ ಸಿಇಒ ದೀಪಕ್ ಸಪ್ರ ತಿಳಿಸಿದ್ದಾರೆ.

ಆಮದು ಮಾಡಿಕೊಂಡ ಲಸಿಕೆಯ ಬೆಲೆ ಪ್ರತಿ ಡೋಸ್‌ಗೆ 10 ಡಾಲರ್ (ಸುಮಾರು 740 ರೂ.) ಆಗಿರಲಿದೆ. ಇದು ಜಾಗತಿಕ ಬೆಲೆಗೆ (3ನೇ ಪುಟಕ್ಕೆ)

# ರೆಮ್ಡಿಸಿವಿರ್ ಕಾಳಸಂತೆಯಲ್ಲಿ ಮಾರಿದರೆ ಕ್ರಮ

**18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡುವುದಕ್ಕೆ ಸಿಎಂ ಚಾಲನೆ**

ಬೆಂಗಳೂರು, ಮೇ 1 – ಕೊರೊನಾ ಸಂದರ್ಭದಲ್ಲಿ ಯಾರಾದರೂ ರೆಮಿಡಿಸಿವಿರ್ ಔಷಧಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವುದು ಗಮನಕ್ಕೆ ಬಂದರೆ ಅಂತಹವರ ವಿರುದ್ಧ ಶಿಸ್ತು ಕ್ರಮದ ಜೊತೆಗೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಎಚ್ಚರಿಸಿದ್ದಾರೆ.

ನಗರದ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಡೆದ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡುವ ಕಾರ್ಯಕ್ಕೆ ಚಾಲನೆ ನೀಡಿದ ಬಳಿಕ ಅವರು ಸುದ್ದಿಗಾರರ ಜೊತೆ ಮಾತನಾಡುತ್ತಿದ್ದರು.

ಖಾಸಗಿ ಆಸ್ಪತ್ರೆಯಲ್ಲಿ ಲಸಿಕೆಗೆ ದರ ನಿಗದಿಪಡಿಸಲಾಗಿದೆ. ನಿಗದಿಪಡಿಸಿದ ದರಕ್ಕಿಂತ ಹೆಚ್ಚು ಬೆಲೆ ತೆಗೆದುಕೊಳ್ಳುವಂತಿಲ್ಲ. ಒಂದು ವೇಳೆ ಯಾರೇ ಹೆಚ್ಚು ಬೆಲೆಗೆ ಮಾರಿದರೆ ಗಮನಕ್ಕೆ ತನ್ನಿ. ಅಂತವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ.

3 ಲಕ್ಷ ಲಸಿಕೆ ಕೇಂದ್ರದಿಂದ ಲಭ್ಯವಾಗಿದೆ. ನಮ್ಮ ಬಳಿಯೂ 1ಲಕ್ಷ ಲಸಿಕೆ ಇದೆ. 2ಕೋಟಿ ಲಸಿಕೆ ಖರೀದಿಗೆ ಈಗಾಗಲೇ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಇಂದಿನಿಂದ ಉಚಿತವಾಗಿ ಲಸಿಕೆ ನೀಡಲಾಗುವುದು. 2 - 3 ದಿನಗಳಲ್ಲಿ ಎಲ್ಲಾ ಸಮಸ್ಯೆಗಳು ಇತ್ಯರ್ಥವಾಗಲಿವೆ. ಈಗ 40 ಲಕ್ಷ ಲಸಿಕೆ ಇದೆ, ಮುಂದೆ ಸ್ಟಾಕ್ ಬರಲಿದೆ. ಯಾರೂ ಕೂಡ ಆತಂಕಪಡುವ ಅಗತ್ಯವಿಲ್ಲ ಎಂದು ತಿಳಿಸಿದರು.

ಕೊರೊನಾ ಅಲೆ ಸಾಕಷ್ಟು ಪೀಡಿಸುತ್ತಿರುವ ಸಂದರ್ಭ. ಕೇಂದ್ರ ಸರ್ಕಾರ ಸಾಕಷ್ಟು ಸಹಕಾರ ನೀಡುತ್ತಿದೆ. ಪ್ರಧಾನಿಗೆ ನಾನು ಅಭಿನಂದನೆ ಸಲ್ಲಿಸುವೆ ಎಂದು ತಿಳಿಸಿದರು.

ಖಾಸಗಿ ಆಸ್ಪತ್ರೆಗಳು ಬೆಡ್ ನೀಡದ ಆರೋಪದ ಕುರಿತಾಗಿ ಮಾತನಾಡಿದ ಅವರು, ನಾನೇ ಇಂದು ಸಂಜೆ ಸಭೆ ನಡೆಸಲಿದ್ದೇನೆ. ಎಲ್ಲವೂ ವ್ಯವಸ್ಥೆ ಮಾಡಲು ಸೂಚನೆ ಕೊಡುತ್ತೇನೆ ಎಂದು ಹೇಳಿದರು.

## ಜಿಲ್ಲೆಯಲ್ಲಿ ಆರು ಕೊರೊನಾ ಸಾವು

ದಾವಣಗೆರೆ, ಮೇ. 1 - ಜಿಲ್ಲೆಯಲ್ಲಿ ಶನಿವಾರ ಕೋವಿಡ್ ಸೋಂಕಿನಿಂದಾಗಿ ಆರು ಜನರು ಮೃತಪಟ್ಟಿದ್ದು, 386 ಜನರಲ್ಲಿ ಸೋಂಕು ಕಾಣಿಸಿಕೊಂಡ ಬಗ್ಗೆ ವರದಿಯಾಗಿದೆ. ಎರಡೇ ದಿನಗಳ ಅಂತರದಲ್ಲಿ 12 ಸಾವುಗಳು ಸಂಭವಿಸಿದ್ದು, ಜನರಲ್ಲಿ ಆತಂಕ ಹೆಚ್ಚಿಸಿದೆ. ಇಲ್ಲಿಯವರೆಗೆ ಮೃತಪಟ್ಟವರ ಸಂಖ್ಯೆ 283, ಪ್ರಸ್ತುತ ಜಿಲ್ಲೆಯಲ್ಲಿ 2097 ಸಕ್ರಿಯ ಪ್ರಕರಣಗಳಿವೆ.

ದಾವಣಗೆರೆ ತಾಲ್ಲೂಕಿನಲ್ಲಿ ಇಂದು 243, ಹರಿಹರ 53, ಜಗಳೂರು 21, ಚನ್ನಗಿರಿ 29, ಹೊನ್ನಾಳಿ 21 ಹಾಗೂ ಹೊರ ಜಿಲ್ಲೆಯ 19 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

## ಎಪಿಎಂಸಿ ವಹಿವಾಟು ಅವಧಿ ಮಧ್ಯಾಹ್ನ 12ರವರೆಗೆ ವಿಸ್ತರಣೆ

**ಸಂಜೆ 6 ರವರೆಗೆ ಹಣ್ಣು, ತರಕಾರಿ, ಹಾಲು ಮಾರಾಟಕ್ಕೆ ಅನುಮತಿ**

ಬೆಂಗಳೂರು, ಮೇ 1 – ಹಾಪ್‌ಕಾಮ್ಸ್, ಹಾಲಿನ ಬೂತ್‌ಗಳು, ತಳ್ಳುವಗಾಡಿ ಮೂಲಕ ಮಾರುವ ಹಣ್ಣು ಹಾಗೂ ತರಕಾರಿಗಳನ್ನು ಬೆಳಿಗ್ಗೆ 6ರಿಂದ ಸಂಜೆ 6ರವರೆಗೆ ಮಾರಾಟ ಮಾಡಲು ಮತ್ತು ಎಪಿಎಂಸಿಗಳು ಬೆಳಿಗ್ಗೆ 6ರಿಂದ ಮಧ್ಯಾಹ್ನ 12 ಗಂಟೆವರೆಗೆ ತೆರೆಯಲು ರಾಜ್ಯ ಸರ್ಕಾರ ಅನುಮತಿ ನೀಡಿದೆ.

ಈ ಬಗ್ಗೆ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಸದಸ್ಯ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್ ಆದೇಶ ಹೊರಡಿಸಿದ್ದಾರೆ.

ಈ ಹಿಂದೆ ಬೆಳಿಗ್ಗೆ 6ರಿಂದ 10ರವರೆಗೆ ಮಾತ್ರ ಈ ಚಟುವಟಿಕೆಗಳಿಗೆ ಅವಕಾಶವಿತ್ತು. ಇದು ಹೆಚ್ಚಿನ ಜನಸಂದಣಿಗೆ ಕಾರಣವಾಗುತ್ತದೆ ಎಂಬ ದೂರುಗಳು ಕೇಳಿ ಬಂದಿದ್ದವು.

ಈ ಹಿನ್ನೆಲೆಯಲ್ಲಿ ಹಾಪ್‌ಕಾಮ್ಸ್, ಎಲ್ಲಾ ಹಾಲಿನ ಬೂತ್‌ಗಳು, ತಳ್ಳುವ ಗಾಡಿಯಲ್ಲಿ ಹಣ್ಣು - ತರಕಾರಿಗಳನ್ನು ಸಂಜೆ 6ರ ವರೆಗೆ ಮಾರಲು ಅನುಮತಿ ನೀಡಲಾಗಿದೆ.

## ದಾವಣಗೆರೆ ಜಿ.ಪಂ.ಗೆ ಆಡಳಿತಾಧಿಕಾರಿ ನೇಮಕ



ದಾವಣಗೆರೆ, ಮೇ 1- ಮೇ 2ರಂದು ಅಧಿಕಾರವಧಿ ಮುಕ್ತಾಯಗೊಳ್ಳಲಿರುವ ದಾವಣಗೆರೆ ಜಿಲ್ಲಾ ಪಂಚಾಯ್ತಿಗೆ ಆಡಳಿತಾಧಿಕಾರಿಯನ್ನಾಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಅವರನ್ನು ಸರ್ಕಾರ ನೇಮಕ ಮಾಡಿದೆ.

ವಿವಿಧ ದಿನಾಂಕಗಳಂದು ಅಧಿಕಾರವಧಿ ಮುಕ್ತಾಯಗೊಳ್ಳುವ ಜಿಲ್ಲೆಯ ತಾಲ್ಲೂಕು ಪಂಚಾಯ್ತಿಗಳಿಗೆ ಆಡಳಿತಾಧಿಕಾರಿಯನ್ನಾಗಿ ಜಿ.ಪಂ. ಉಪ ಕಾರ್ಯದರ್ಶಿ ಅಥವಾ ಆ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿಗಳನ್ನು ನೇಮಿಸಲು ಪ್ರಾದೇಶಿಕ ಆಯುಕ್ತರಿಗೆ ಅಧಿಕಾರ ನೀಡಲು ಸರ್ಕಾರ ನಿರ್ಧರಿಸಿದೆ. ದಾವಣಗೆರೆ ತಾ.ಪಂ. ಅಧಿಕಾರವಧಿಯು ಮೇ 15ರಂದು, ಹರಿಹರ ತಾ.ಪಂ. ಮೇ 11, ಚನ್ನಗಿರಿ ತಾಪಂ. ಮೇ 9ರಂದು, ಹೊನ್ನಾಳಿ ಮತ್ತು ನ್ಯಾಮತಿ ತಾ.ಪಂ. ಮೇ 12ರಂದು, ಜಗಳೂರು ತಾ.ಪಂ. ಅಧಿಕಾರವಧಿಯು ಜು. 1ರಂದು ಮುಕ್ತಾಯಗೊಳ್ಳಲಿದೆ.

## ವಾರ್ಡ್‌ಗಳ ಸರ್ವಾಂಗೀಣ ಅಭಿವೃದ್ಧಿಗೆ ಒತ್ತು



**ಹರಿಹರ ನಗರಸಭೆ ನೂತನ ಅಧ್ಯಕ್ಷೆ ರತ್ನ ಉಜ್ಜೇಶ್**

ಹರಿಹರ, ಮೇ 1- ನಗರಸಭೆಯ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರ ಸಹಕಾರದೊಂದಿಗೆ ನಗರದ ಎಲ್ಲಾ ವಾರ್ಡ್‌ಗಳ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುವುದಾಗಿ ನಗರಸಭೆ ನೂತನ ಅಧ್ಯಕ್ಷರಾದ ಡಿ.ಯು. ರತ್ನ ಉಜ್ಜೇಶ್ ಹೇಳಿದರು.

ಅವರು ನಗರಸಭೆ ಆವರಣದಲ್ಲಿ ಅಧಿಕಾರ ಸ್ವೀಕರಿಸಿ ಮಾತನಾಡಿ, ಕೊರೊನಾ ನಿಯಂತ್ರಣ ಹಾಗೂ ನಗರದ ಅಭಿವೃದ್ಧಿ ವಿಚಾರವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಮುಂದಿನ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಿ, ನಗರಕ್ಕೆ ಪೂರಕವಾದ ಅಭಿವೃದ್ಧಿ ಕೆಲಸ, ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡುವುದಾಗಿ ತಿಳಿಸಿದರು.

ನಗರದಲ್ಲಿನ ಪ್ರತಿಯೊಂದು ಬಡಾವಣೆಗೆ ವಿದ್ಯುತ್, ಸ್ವಚ್ಛತೆ, ಶುದ್ಧ ಕುಡಿಯುವ ನೀರು, ರಸ್ತೆ, ಚರಂಡಿ, ಪಾರ್ಕ್ ಸೇರಿದಂತೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತದೆ. ನಾಳೆಯಿಂದ ನಗರಸಭೆಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಜೊತೆಗೆ ವಾರ್ಡ್‌ಗೆ ಭೇಟಿ ನೀಡಿ ಪರಿಶೀಲಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಪೌರಾಯುಕ್ತರಾದ ಎಸ್. ಲಕ್ಷ್ಮಿ, ನಗರಸಭೆ ಎಇಇ ಬಿರಾದಾರ, ಉಪಾಧ್ಯಕ್ಷ ಎಂ. ಬಾಬುಲಾಲ್, ನಗರಸಭೆ ಸದಸ್ಯರಾದ ಎ. ವಾಮನಮೂರ್ತಿ, ಶಂಕರ್ ಖಟಾವ್ಕರ್, ಪಿ.ಎನ್. ವಿರೂಪಾಕ್ಷ, ನಿಂಬಕ್ಕ ಚಂದಾಪೂರ್, ಉಷಾ ಮಂಜುನಾಥ್, ಅಶ್ವಿನಿ ಕೆ.ಜಿ. ಕೃಷ್ಣ, ನಾಗರತ್ನ, ಕೆ.ಜಿ. ಸಿದ್ದೇಶ್, ಲಕ್ಷ್ಮೀ (3ನೇ ಪುಟಕ್ಕೆ)

## ಒಂದೇ ದಿನ 2.90 ಲಕ್ಷ ದಂಡ ವಸೂಲಿ

ದಾವಣಗೆರೆ, ಮೇ. 1 - ಜಿಲ್ಲೆಯಲ್ಲಿಂದು ಕೊರೊನಾ ಮಾರ್ಗಸೂಚಿ ಉಲ್ಲಂಘಿಸಿದವರಿಗೆ ದಂಡದ ಬಿಸಿ ಮುಟ್ಟಿಸಿರುವ ಪೊಲೀಸರು ಮಾಸ್ಕ್ ಧರಿಸದವರಿಂದ 1664 ಪ್ರಕರಣಗಳನ್ನು ದಾಖಲಿಸಿ, 2,97,700 ರೂ. ದಂಡ ವಸೂಲಿ ಮಾಡಿದ್ದಾರೆ. 52 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಕೆಇಡಿ ಆಕ್ಟ್ ಪ್ರಕಾರ 38 ಪ್ರಕರಣಗಳು ದಾಖಲಾಗಿವೆ.

## ರಾಜ್ಯದಲ್ಲಿ 4 ಲಕ್ಷ ದಾಟಿದ ಸಕ್ರಿಯ ಸೋಂಕು

ಬೆಂಗಳೂರು, ಮೇ 1 – ರಾಜ್ಯದಲ್ಲಿ ಶನಿವಾರದಂದು ಸಕ್ರಿಯ ಕೊರೊನಾ ಸೋಂಕಿತರ ಸಂಖ್ಯೆ 4 ಲಕ್ಷದ ಗಡಿ ದಾಟಿದೆ. ಈ ದಿನದಂದು 40,990 ಸೋಂಕಿತರು ಕಂಡು ಬಂದಿದ್ದಾರೆ ಹಾಗೂ 271 ಜನ ಸಾವನ್ನಪ್ಪಿದ್ದಾರೆ.

ಈ ದಿನ ಸಕ್ರಿಯ (2ನೇ ಪುಟಕ್ಕೆ)

## ಆಕ್ಸಿಜನ್ ಕೊರತೆಯಿಂದ ವೈದ್ಯ ಸೇರಿ 12 ಜನರ ಸಾವು

ನವದೆಹಲಿ, ಮೇ 1 – ದೆಹಲಿಯ ಬಾದ್ರಾ ಆಸ್ಪತ್ರೆಯಲ್ಲಿ ಅದೇ ಆಸ್ಪತ್ರೆಯ ವೈದ್ಯರೊಬ್ಬರೂ ಸೇರಿದಂತೆ ಹನ್ನೆರಡು ಕೊರೊನಾ ರೋಗಿಗಳು ಆಕ್ಸಿಜನ್ ಕೊರತೆಯಿಂದ ಸಾವನ್ನಪ್ಪಿದ ಘಟನೆ ನಡೆದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಒಮ್ಮೆ ಆಕ್ಸಿಜನ್ ಪೂರೈಕೆ ಕಠಿಣ ಹಂತಕ್ಕೆ ತಲುಪಿದರೆ, ರೋಗಿಯನ್ನು ಉಳಿಸಿಕೊಳ್ಳುವುದು ಕಷ್ಟ. ದುರಾದೃಷ್ಟವಶಾತ್ ಇನ್ನಷ್ಟು ಸಾವುಗಳು ಸಂಭವಿಸುವ ಸಾಧ್ಯತೆ ಇದೆ ಎಂದು ಆಸ್ಪತ್ರೆಯ ಕಾರ್ಯಕಾರಿ ನಿರ್ದೇಶಕ ಸುಧಾಂಶು ಬಂಕಟ ಹೇಳಿದ್ದಾರೆ.

ಆಸ್ಪತ್ರೆಯ ಗ್ಯಾಸ್ಟ್ರೋಎಂಟರಾಲಜಿ ವಿಭಾಗದ ಮುಖ್ಯಸ್ಥ ಆರ್.ಕೆ ರಿಮ್ಮನಿ ಸಹ ಮೃತರಲ್ಲಿ ಸೇರಿದ್ದಾರೆ. ಅವರು 15-20 ದಿನಗಳಿಂದ ಆಸ್ಪತ್ರೆಗೆ ದಾಖಲಾಗಿದ್ದರು.

ಶೀಘ್ರವೇ ಆಸ್ಪತ್ರೆಗೆ ಆಕ್ಸಿಜನ್ ಪೂರೈಸುವಂತೆ ಶನಿವಾರವೇ ತುರ್ತು ಮನವಿ ರವಾನಿಸಲಾಗಿತ್ತು. ಆದರೆ, ಆಸ್ಪತ್ರೆ ಬಳಿ ಇದ್ದ ಆಕ್ಸಿಜನ್ ಸಂಪೂರ್ಣ ಖಾಲಿ ಆದ 80 ನಿಮಿಷಗಳ ನಂತರ ಪೂರೈಕೆ ಮಾಡಲಾಗಿತ್ತು.

# ವೃದ್ಧಾಶ್ರಮಗಳಿಗೆ ಕೊರೊನಾ ಪೆಟ್ಟು...

**ಹಿರಿಯ ಜೀವಿಗಳಿಗೆ ಕ್ವಾರಂಟೈನ್ ರೀತಿ ಸಂರಕ್ಷಣೆ,**
**ವೃದ್ಧಾಶ್ರಮಕ್ಕೆ ಹೊರಗಿನಿಂದ ಬಂದವರಿಗೆ ನೋ ಎಂಟ್ರಿ,**
**ಪ್ರೀತಿ ಪಾತ್ರರನ್ನೂ ಮಾತನಾಡಿಸಲಾಗದ ಸ್ಥಿತಿಯಲ್ಲಿ ಹಿರಿಯ ಜೀವಗಳು**



ಸಾಂದರ್ಭಿಕ ಚಿತ್ರ

ಕೆ. ಎನ್. ಮಲ್ಲಿಕಾರ್ಜುನ ಮೂರ್ತಿ

ದಾವಣಗೆರೆ : ಕೊರೊನಾ ಮಹಾಮಾರಿಯಿಂದ ಹಿರಿಯ ನಾಗರಿಕರನ್ನು ರಕ್ಷಿಸುವುದು ಸವಾಲಿನ ಕೆಲಸ. ಅದರಲ್ಲೂ ವಿವಿಧ ಕಾರಣಗಳಿಂದಾಗಿ ವೃದ್ಧಾಶ್ರಮಗಳಿಗೆ ಬಂದ ಹಿರಿಯ ಜೀವಿಗಳನ್ನು ರಕ್ಷಿಸುವ ಹೊಣೆ ಸುಲಭದ ಮಾತಲ್ಲ.

ಸದ್ಯದ ದಿನಗಳಲ್ಲಿ ಆಶ್ರಮದಲ್ಲಿನ ವೃದ್ಧರನ್ನು ಕ್ವಾರಂಟೈನ್ ರೀತಿಯಲ್ಲಿ ಸಂರಕ್ಷಿಸಲಾಗುತ್ತಿದೆ. ಹೀಗಾಗಿ ಆಶ್ರಮದಲ್ಲಿನ ಹಿರಿಯರನ್ನು ನೋಡಲು ಆಗಾಗ ಬಂದು ಹೋಗುವ ಬಂಧು ಬಾಂಧವರನ್ನು ವೃದ್ಧಾಶ್ರಮದ ಸಿಬ್ಬಂದಿಗಳು ವೃದ್ಧರ ಬಳಿ ಬಿಡುತ್ತಿಲ್ಲ. ಜೊತೆಗೆ ಸಾರ್ವಜನಿಕ ಸಾರಿಗೆಯೂ ಇಲ್ಲ. ಕಾರಣ, ಸಂಬಂಧಿಕರು, ಬಂಧು-ಬಾಂಧವರು ವೃದ್ಧಾಶ್ರಮಗಳ ಕಡೆಗೆ ಬರುವುದೂ ಕಡಿಮೆಯಾಗಿಬಿಟ್ಟಿದೆ. ಪ್ರೀತಿ ಪಾತ್ರರನ್ನೂ ಮಾತನಾಡಿಸ ಲಾಗದ ಸ್ಥಿತಿಯಲ್ಲಿ ಹಿರಿಯ ಜೀವಗಳು ನಿಟ್ಟುಸಿರುಬಿಡುತ್ತಿವೆ.

ನೌಕರರಿಂದ, ಸಂದರ್ಶಕ ರಿಂದ, ಅತಿಥಿಗಳಿಂದ ವೃದ್ಧಾಶ್ರಮ ದಲ್ಲಿ ಇರುವ ಹಿರಿಯ ನಾಗರಿಕರಿಗೆ ಸೋಂಕು ತಗುಲುವ ಆತಂಕ ಇದ್ದೇ ಇದೆ. ಹೀಗಾಗಿ ಬಹು ಎಚ್ಚರಿಕೆ ಅಗತ್ಯವಾಗಿದೆ. ತೀರಾ ಅನಿವಾರ್ಯ ಸಂದರ್ಭ ಹೊರತುಪಡಿಸಿದರೆ ಮಿಕ್ಕ ಯಾವ ಸಂದರ್ಭದಲ್ಲೂ ಹೊರಗಿನವರನ್ನು ಒಳಗೆ ಬಿಡುತ್ತಿಲ್ಲ. ಒಳಗೆ ಬರುವ ಅತಿಥಿಗಳು ತಮ್ಮ ಕೈಗಳನ್ನು ತೊಳೆದುಕೊಂಡು ಬರಬೇಕು, ಕಡ್ಡಾಯವಾಗಿ ಮಾಸ್ಕ್ ಧರಿಸಬೇಕೆಂಬ ನಿಯಮಗಳನ್ನು ಈಗಾಗಲೇ ಹಲವಾರು ವೃದ್ಧಾಶ್ರಮಗಳಲ್ಲಿ ಮಾಡಲಾಗಿದೆ.

ಸದ್ಯದ ಮಟ್ಟಿಗೆ ಕೆಲವು ವೃದ್ಧಾಶ್ರಮಗಳಲ್ಲಿ ವೈದ್ಯರು ಹಾಗೂ ನರ್ಸ್‌ಗಳ ಸೇವೆಯೂ ಕಷ್ಟ ಸಾಧ್ಯ. ಹೀಗಾಗಿ, ರೋಗಗಳು ಬರದಂತೆ ತಡೆಯುವುದೇ ಒಳ್ಳೆಯದು ಎಂಬ ಸೂತ್ರಕ್ಕೆ ವೃದ್ಧಾಶ್ರಮಗಳು ಮುಂದಾಗಿವೆ. ಈ ಮೂಲಕ, ಜೀವನದ ಸಂಧ್ಯಾಕಾಲದಲ್ಲಿ ಇರುವ ಹಿರಿ ಜೀವಗಳಿಗೂ ಕೊರೊನಾ ಕಂಟಕವಾಗಿ ಪರಿಣಮಿಸಿದೆ.

ಸಾರ್ವಜನಿಕ ಸಾರಿಗೆ ಇಲ್ಲದ ಕಾರಣ (3ನೇ ಪುಟಕ್ಕೆ)

> ನಾವು ನಡೆಸುವ ವೃದ್ಧಾಶ್ರಮದಲ್ಲಿ ಸದ್ಯ 15 ಜನರಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಸಲುವಾಗಿ ಹೊಸಬರಿಗೆ ಒಳ ಬಿಡುತ್ತಿಲ್ಲ. ಬೆಳಿಗ್ಗೆ 6 ರಿಂದ 10ರವರೆಗೆ ಅಗತ್ಯ ವಸ್ತುಗಳ ಖರೀದಿಗೆ ಅನುಕೂಲ ಮಾಡಿರುವುದರಿಂದ ಅಷ್ಟಾಗಿ ತೊಂದರೆಯಾಗಿಲ್ಲ.
>
> **- ಶಾಂತಿನಾಥ್,** ಅಧ್ಯಕ್ಷರು, ಶ್ರೀಮಾತಾ ಟ್ರಸ್ಟ್, ಶಾಸ್ತ್ರಿಹಳ್ಳಿ.

> ವೃದ್ಧಾಶ್ರಮಗಳಲ್ಲಿನ ಹಿರಿಯ ನಾಗರಿಕರಿಗೆ ಕೋವಿಡ್ ಲಸಿಕೆ ಕೊಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಹಲವು ಹಿರಿಯ ನಾಗರಿಕರು ಮೊದಲ ಹಂತದಲ್ಲಿ ಲಸಿಕೆ ಪಡೆದಿದ್ದಾರೆ. 2ನೇ ಹಂತದ ಲಸಿಕೆ ನೀಡಬೇಕಿದೆ.
>
> **- ಜಿ.ಎಸ್. ಶಶಿಧರ್,** ಉಪ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

> ನಾವು ದೈಹಿಕವಾಗಿ ದುರ್ಬಲರಾದ, ಹಾಸಿಗೆ ಹಿಡಿದ ವೃದ್ಧರನ್ನು ಮಾತ್ರ ನೋಡಿಕೊಳ್ಳುತ್ತಿದ್ದೇವೆ. ಸದ್ಯ 22 ಜನರಿದ್ದಾರೆ. ಕೊರೊನಾ ಕರ್ಫ್ಯೂ ಇರುವುದರಿಂದ ದಿನಸಿ, ಅಗತ್ಯ ವಸ್ತುಗಳನ್ನು ತರಲು ತುಸು ಕಷ್ಟವಾಗುತ್ತಿದೆ. ಇಲ್ಲಿನ ಹಿರಿಯರು ದೈಹಿಕವಾಗಿ ದುರ್ಬಲರಾಗಿರುವುದರಿಂದ ಇಲ್ಲಿಗೇ ಬಂದು ಲಸಿಕೆ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಆದರೆ ಸದ್ಯ ಲಸಿಕೆ ಕೊರತೆ ಇರುವುದರಿಂದ ಸಾಧ್ಯವಾಗಿಲ್ಲ.
>
> **- ವೆಂಕಟೇಶ್,** ಸಂಸ್ಥಾಪಕರು, ಜ್ಯೋತಿ ನಿರಂತರ ಸೇವಾ ಚಾರಿಟಬಲ್ ಟ್ರಸ್ಟ್, ನಿಟುವಳ್ಳಿ, ದಾವಣಗೆರೆ.


ಕೊಡಗನೂರು ಪ್ರಭಾಕರ ಗೌಡ್ರು ನಿಧನ



ಜನನ : 10-10-1965
ನಿಧನ : 01-05-2021

ದಾವಣಗೆರೆ ತಾಲ್ಲೂಕಿನ ಕೊಡಗನೂರು ಗ್ರಾಮದ ಗೌಡ್ರ ಜಯ್ಯಪ್ಪ ಇವರ ಕಿರಿಯ ಪುತ್ರರಾದ ಪ್ರಭಾಕರ ಗೌಡ್ರು ಇಂದು ಬೆಳಗ್ಗೆ 5-30ಕ್ಕೆ ಅನಾರೋಗ್ಯದಿಂದ ಬೆಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು
ಮೃತರು ತಂದೆ ಸಹೋದರ, ಸಹೋದರಿ, ಪತ್ನಿ ಓರ್ವ ಪುತ್ರ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.
ಮೃತರ ಅಂತ್ಯಕ್ರಿಯೆ 01-05-2021ರ ಶನಿವಾರ ಸಂಜೆ 5-30 ಕ್ಕೆ ಕೊಡಗನೂರಿನ ಸ್ವಂತ ಜಮೀನಿನಲ್ಲಿ ನೆರವೇರಿತು.

ಇಂತಿ ದುಃಖತಪ್ತ
ಪುತ್ರ: ಕೀರ್ತಿಗೌಡ: 9986205000 ಮತ್ತು ಕುಟುಂಬ ವರ್ಗ

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಬಿಲ್ಡಿಂಗ್ ಮಾರಾಟಕ್ಕಿದೆ**
ವೈಷ್ಣವಿ ನಿಲಯ, 3ನೇ ಬಸ್ ಸ್ಟಾಪ್, 10ನೇ ಕ್ರಾಸ್, ಟಿ.ಬಿ. ಬಡಾವಣೆ, ವಿದ್ಯಾನಗರ, ದಾವಣಗೆರೆ.
30x40 ಅಳತೆಯ (33 ಚದರ)
3 ಮಹಡಿ ಮನೆ ಮಾರಾಟಕ್ಕಿದೆ.
95387 56409, 93410 21209

**ಭದ್ರಾ ನ್ಯಾಚುರಲ್ಸ್**
ದಾವಣಗೆರೆ ರಾಂ ಅಂಡ್ ಕೋ ಸರ್ಕಲ್, ಮೆಡ್ ಪ್ಲೆಸ್ ಎದುರಿಗಿರುವ ಭದ್ರಾ ನ್ಯಾಚುರಲ್ಸ್ ಆರ್ಯವೇದಿಕ್ ಔಷಧಿಗಳು, ಸಾವಯವ, ನೈಸರ್ಗಿಕ ಆಹಾರ ದಿನಸಿ ಒಂದೇ ಸೂರಿನಡಿ ದೊರೆಯುತ್ತವೆ.
ಮೆಳ್ಳೇಕಟ್ಟೆ ಬಸವರಾಜ್ B.Sc (Agri)
94483 23796, 91646 76826

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
**ಡಾ. ಇ.ಆರ್. ಸಿದ್ದೇಶಿ**
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಸೈಟುಗಳು ಮಾರಾಟಕ್ಕಿವೆ ಮನೆಗಳು ಬಾಡಿಗೆಗೆ ಇವೆ**
ವಿದ್ಯಾನಗರ, ವಿನಾಯಕ ಬಡಾವಣೆ, ಸ್ವಾಮಿ ವಿವೇಕಾನಂದ ಬಡಾವಣೆ, ಆಂಜನೇಯ ಬಡಾವಣೆ, ಬನಶಂಕರಿ ಬಡಾವಣೆಯಲ್ಲಿ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬ್ಯಾಡಗಿ ಖಾರದ ಪುಡಿ ದೊರೆಯುತ್ತದೆ**
ನಮ್ಮಲ್ಲಿ ಉತ್ತಮ ಗುಣಮಟ್ಟದ ಹಾಗೂ ಶುದ್ಧವಾದ ಬ್ಯಾಡಗಿ ಖಾರದ ಪುಡಿ ಈ ಕೆಳಗಿನ ದರದಲ್ಲಿ ದೊರೆಯುತ್ತದೆ.
110 ರೂ. 1 ಕೆ.ಜಿ., 150 ರೂ. 1 ಕೆ.ಜಿ., 200 ರೂ. 1 ಕೆ.ಜಿ., 250 ರೂ. 1 ಕೆ.ಜಿ., 300 ರೂ. 1 ಕೆ.ಜಿ., 450 ರೂ. 1 ಕೆ.ಜಿ.
ಆನಂದ ಕಾಂಪ್ಲೆಕ್ಸ್, ನಂ. 12, ಅಶೋಕ ರಸ್ತೆ, ದಾವಣಗೆರೆ.
90085 36467

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಚಿ. ಅಭಿಷೇಕ್ ಇವರ ಹುಟ್ಟುಹಬ್ಬದ ಪ್ರಯುಕ್ತ ಶ್ರೀ ಜೆ.ವಿ. ಹನುಮಂತ ರೆಡ್ಡಿ ಶ್ರೀಮತಿ ಶಶಿಕಲಾ ಇವರ ಕುಟುಂಬ ವರ್ಗದವರ ಸೇವಾರ್ಥ
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

**ಮರದ ಗಾಣದ ಶೇಂಗಾ ಎಣ್ಣೆ, ಕೊಬ್ಬರಿ ಎಣ್ಣೆ ತಯಾರಿಕಾ ಘಟಕ**
ನಮ್ಮಲ್ಲಿ ಶೇಂಗಾ ಎಣ್ಣೆ ಮತ್ತು ಕೊಬ್ಬರಿ ಎಣ್ಣೆ ಹಾಗೂ ಸಿರಿಧಾನ್ಯಗಳು ದೊರೆಯುತ್ತವೆ.
ಸಂಪರ್ಕಿಸಿ : ಮೈಸೂರು ನ್ಯಾಚುರಲ್ಸ್
ಶಾಮನೂರು. ಮೊ. 99717-95156

**ಸೈಟು ಬೇಕಾಗಿದೆ**
ಬನಶಂಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಬನಶ್ರೀ, ಶಿವ ಪಾರ್ವತಿ ಹಾಗೂ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಸೈಟು ಬೇಕಾಗಿದೆ. ಸಂಪರ್ಕಿಸಿ :
91106 99014
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಮನೆ ಮಾರಾಟಕ್ಕಿದೆ**
14x36ರ ಅಳತೆಯ ಮಹಡಿ ಮನೆ ಮಾರಾಟಕ್ಕಿದೆ.
89717 21755

**ಜಮೀನು ಮಾರಾಟಕ್ಕಿದೆ**
ಪುಣಭಘಟ್ಟ ಗ್ರಾಮ, ಅರಸಿಕೇರಿ ಹೋಬಳಿ, ಸರ್ವೆ ನಂ.335/A 4-08 ಸೆಂಟ್ಸ್, ಸರ್ವೆ ನಂ.335/B 2-43 ಸೆಂಟ್ಸ್, ಸರ್ವೆ ನಂ.335/1 1-62 ಸೆಂಟ್ಸ್, ಒಟ್ಟು 8.13 ಸೆಂಟ್ಸ್, 2 ಪಂಪ್‌ಸೆಟ್ ಹೊಂದಿರುವ ಜಮೀನು ಮಾರಾಟಕ್ಕಿದೆ.
99726 02950

**ಮನೆ ಬಾಡಿಗೆಗೆ/ಲೀಸ್‌ಗೆ ಬೇಕಾಗಿದೆ**
2 BHK, ಗ್ರೌಂಡ್ ಫ್ಲೋರ್, ವಾಸ್ತುವಿರುವ ಸಪ್ತಗಿರಿ ಸ್ಕೂಲ್ ಸುತ್ತ ಮುತ್ತಲು ಕುಂದುವಾಡ ರಸ್ತೆಗೆ ಹತ್ತಿರ ಮನೆ ಲೀಸ್‌ಗೆ ಬೇಕಾಗಿದೆ. ಇದ್ದವರು ಸಂಪರ್ಕಿಸಿ
87468 12999

**India's No 1 Water Conditioner**
ಬೋರ್ ನೀರಿನ ಬಿಳಿ (calcium Deposition) ಕಲೆ ಹಾಗೂ Hardness ಸಲುವಾಗಿ ಸಾಕಾಗಿದ್ದರೆ ಅಳವಡಿಸಿ ನಿಶ್ಚಿಂತೆಯಾಗಿರಿ No. Maintainance, Fit & Forget, one Time Investment Long Life. for More Details
87468 12999

**ಬೇಕಾಗಿದ್ದಾರೆ**
ಮನೆ ಕೆಲಸಕ್ಕೆ ಲಿಂಗಾಯತ ಮಹಿಳೆ ಬೇಕಾಗಿದ್ದಾರೆ.
94838 62779

**ಮನೆಯಿಂದಲೇ ಕಲಿಯಿರಿ**
Basic, DTP, PHOTOSHOP, SPOKEN ENGLISH, TALLY
74062 78270
97426 10385

**ಮನೆ ಮಾರಾಟಕ್ಕಿದೆ**
20x30, 30x40, ಸರಸ್ವತಿ ನಗರ
ಮಾಲೀಕರ ಸಂಖ್ಯೆ
97388 79753

**ಮನೆ ಮತ್ತು ರೂಂ ಬಾಡಿಗೆಗೆ**
2 BHK ಮನೆ ಮತ್ತು ಡಬಲ್ ರೂಂ ಬಾಡಿಗೆಗೆ ಇವೆ. 2ನೇ ಫ್ಲೋರ್‌ನಲ್ಲಿ. 14ನೇ ಕ್ರಾಸ್, ಆಂಜನೇಯ ಬಡಾವಣೆ.
98446 05839
ಸಸ್ಯಹಾರಿಗಳಿಗೆ ಮಾತ್ರ

**S V ಸಿರಿಧಾನ್ಯ FOOD PRODUCT**
ನಮ್ಮಲ್ಲೇ ತಯಾರಿಸಿದ ಸಿರಿಧಾನ್ಯದ, ದ್ವಿದಳ ಧಾನ್ಯದ ಸ್ಪೆಷಲ್ ಮಾಲ್ಟ್, ಸಿರಿಧಾನ್ಯದ ಚಪಾತಿ ಹಿಟ್ಟು, ಸಿರಿಧಾನ್ಯದ ರೊಟ್ಟಿ ಹಿಟ್ಟು ದೊರೆಯುತ್ತದೆ. ಡೋರ್ ಡೆಲಿವರಿ ಸೌಲಭ್ಯವಿರುತ್ತದೆ ಹಾಗೂ ಅಂಗಡಿಗಳಲ್ಲಿ ಮಾರಲು ಹೋಲ್ ಸೇಲ್ ದರದಲ್ಲಿಯೂ ನೀಡಲಾಗುವುದು.
ಸಂಪರ್ಕಿಸಿ : 63602 12026

**S V ಸಿರಿಧಾನ್ಯ FOOD PRODUCT**
ನಮ್ಮಲ್ಲೇ ಶುದ್ಧ ಕೊಬ್ಬರಿ, ಕುಸುಬಿ, ಶೇಂಗಾ ಎಣ್ಣೆಯಿಂದ ತಯಾರಿಸಿದ ಸಿರಿಧಾನ್ಯದ ಸ್ಪೆಷಲ್ ಖಾರ, ಬೆಳ್ಳುಳ್ಳಿ ಖಾರ, ರಾಗಿ ಖಾರ ದೊರೆಯುತ್ತದೆ. ಡೋರ್ ಡೆಲಿವರಿ ಸೌಲಭ್ಯವಿರುತ್ತದೆ. ಹಾಗೂ ಅಂಗಡಿಗಳಲ್ಲಿ ಮಾರಲು ಹೋಲ್ ಸೇಲ್ ದರದಲ್ಲಿಯೂ ನೀಡಲಾಗುವುದು.
ಸಂಪರ್ಕಿಸಿ : 63602 12026

**ಜಮೀನು ಮಾರಾಟಕ್ಕಿದೆ**
ಹರಿಹರ, ದೇವರ ಬೆಳಕೆರೆ, ಬಾತಿ, ಕೊಂಡಜ್ಜಿ.
74112 50447

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿ, ಪೂರ್ವ ದಿಕ್ಕಿನ ವಾಸ್ತುವುಳ್ಳ 2 ಬೆಡ್‌ರೂಂ ಮನೆ ಬಾಡಿಗೆಗೆ ಇದೆ. #3366/22 2ನೇ ಮೇನ್, 3ನೇ ಕ್ರಾಸ್, ವಿದ್ಯಾನಗರ, ವಿನಾಯಕ ಬಡಾವಣೆ.
94484 15489

**ಮನೆ ಲೀಸಿಗೆ ಇದೆ**
ಶಾಮನೂರು ಮಲ್ಲಿಕಾರ್ಜುನ್ ಬಡಾವಣೆಯಲ್ಲಿ 15x40 ರ ಬೋರ್‌ವೆಲ್ ನೀರಿನ ವ್ಯವಸ್ಥೆ ಇರುವ ಇಂಡಿಪೆಂಡೆಂಟ್ ಮನೆ ಲೀಸಿಗೆ ಇದೆ. ಸಂಪರ್ಕಿಸಿ
94486 85660

**ಜಾಗ ಬಾಡಿಗೆಗಿದೆ**
ದಾವಣಗೆರೆಯಿಂದ 7 ಕಿ.ಮೀ ದೂರದಲ್ಲಿರುವ ಮಾಗಾನಹಳ್ಳಿಯಲ್ಲಿ ಕೋಳಿಫಾರಂ, ಕುರಿ ಫಾರಂ ಮಾಡುವುದಕ್ಕೆ ಸೂಕ್ತವಾದ ಜಾಗ ಬಾಡಿಗೆಗಿದೆ. ನೀರಿನ ಸೌಕರ್ಯ, ರಸ್ತೆ ಸೌಕರ್ಯವುಳ್ಳ ಜಾಗ ಬಾಡಿಗೆಗಿದೆ. ಸಂಪರ್ಕಿಸಿ
99456 12842
63646 44033

**2 BHK ಮನೆ ಬಾಡಿಗೆಗೆ ಇದೆ**
T.C. ಲೇಔಟ್, ಉಮಿಯಾ ಮಂದಿರದ ಹತ್ತಿರ, ಮೊದಲನೇ ಮಹಡಿ, ಇಂಡಿಪೆಂಡೆಂಟ್ ಮನೆ
ಸಂಪರ್ಕಿಸಿ :
94480 05217

**ಮನೆ ಬಾಡಿಗೆಗಿದೆ**
R.M.C. ಲಿಂಕ್ ರಸ್ತೆ, ಅಥಣಿ ಮಿಲ್ ಎದುರಿಗೆ ಸಿಂಗಲ್ ಬೆಡ್ ರೂಂ ಸುಸಜ್ಜಿತ ಎರಡನೇ ಮಹಡಿ ಮನೆ ಬಾಡಿಗೆಗಿದೆ. ಸಂಪರ್ಕಿಸಿ :
94496 09805

**S.P. Enterprises**
Solar water heater, Chimney, UPS, Battery, Solar Roof ,Top Water Purifier, Sales & Service. Exchange Any Brand. DVG
Mo: 63642 27321
99646 13790

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಕಮರ್ಷಿಯಲ್ ಸ್ಪೇಸ್ ಬಾಡಿಗೆಗೆ**
2000Sqft, ಗ್ರೌಂಡ್ ಫ್ಲೋರ್ ಮತ್ತು 400 Sqft ಮೊದಲನೆ ಮಹಡಿ ಆಫೀಸ್‌ಗೆ. ಪಿ.ಬಿ. ರೋಡಿಗೆ ಹತ್ತಿರ, ಹೋಟೆಲ್ ರಾಜಭವನ ಹಿಂಭಾಗ, ಕುಂದುವಾಡ ರಸ್ತೆಗೇರುವ ಕಟ್ಟಡ ಬಾಡಿಗೆಗೆ ಇದೆ. ಸಂಪರ್ಕಿಸಿ
87468 12999

**ಮಳಿಗೆ / ಮನೆಗಳು ಬಾಡಿಗೆಗೆ / ಲೀಸ್‌ಗಿವೆ**
3BHK ಗ್ರೌಂಡ್ ಫ್ಲೋರ್ ಮನೆ ಮತ್ತು ಮಳಿಗೆ, 2BHK 1 ಮತ್ತು 2ನೇ ಮಹಡಿ ಸುಸಜ್ಜಿತ ಮನೆಗಳು ಬಸವೇಶ್ವರ ಬಡಾವಣೆ ಮುಖ್ಯ ರಸ್ತೆಗೆ ಹೋಟೆಲ್ ಸಾಯಿ ಇಂಟರ್ ನ್ಯಾಷನಲ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ / ಲೀಸ್‌ಗಿವೆ ಸಂಪರ್ಕಿಸಿ
9844132621, 9448113829
9740590797

**ಮನೆ ಬಾಡಿಗೆಗೆ ಇದೆ**
2 BHK ಮಹಡಿ ಮನೆ ನಂ. 535, 5ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
98869 63575,
99808 96996
ಸಸ್ಯಹಾರಿಗಳಿಗೆ ಮಾತ್ರ

**ಮನೆ ಅಥವಾ ಸೈಟು ಬೇಕಾಗಿದೆ**
ವಿದ್ಯಾನಗರ, ತರಳಬಾಳು, ಸ್ವಾಮಿ ವಿವೇಕಾನಂದ, ವಿನಾಯಕ ಬಡಾವಣೆಯಲ್ಲಿ ಮನೆ ಅಥವಾ ಸೈಟ್ ಮಾರವುದಿದ್ದರೆ ಸಂಪರ್ಕಿಸಿ
(ಏಜೆಂಟ್‌ರಿಗೆ ಅವಕಾಶವಿಲ್ಲ)
98809 33630

**State Bank of India**
**'ಜನ್‌ಧನ್ ಖಾತೆ'** ಮಾಡಲಾಗುತ್ತದೆ
(10 ವರ್ಷ ಮೇಲಿನವರಿಗೆ)
ಸಮಯ : ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ
Old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ, #264/1, ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
ಸಂಪರ್ಕಿಸಿ : 99806 10005

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಪಾಸೆಟ್, ಡ್ಯುರೋಫ್ಲೆಕ್ಸ್ ಬೆಡ್, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
SWAPNA CUSHION WORK
Behind Vittal Temple, Maharaj Pet, Davanagere.
98445 81966

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.


# ಅರಸೀಕೆರೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ಸಂಸದರ ದಿಢೀರ್ ಭೇಟಿ



ಹರಪನಹಳ್ಳಿ, ಮೇ 1- ತಾಲ್ಲೂಕಿನ ಅರಸೀಕೆರೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಆಸ್ಪತ್ರೆಯಲ್ಲಿ ಸ್ಯಾನಿಟೈಸರ್ ವ್ಯವಸ್ಥೆ, ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಇಲ್ಲದ ಕಾರಣ ಅಧಿಕಾರಿಗಳ ಮೇಲೆ ಗರಂ ಆದರು.

ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ, ತಾಲ್ಲೂಕು ವೈದ್ಯಾಧಿಕಾರಿಗಳಿಗೆ ದೂರು ನೀಡಿದರಲ್ಲದೆ, ಅರಸೀಕೆರೆಯಲ್ಲಿ ಕೂಡಲೇ ತಾಲ್ಲೂಕು ವೈದ್ಯಾಧಿಕಾರಿಗಳನ್ನು ಕರೆಸಿ, ಕೊರೊನಾ ಪಾಸಿಟಿವ್ ಸಂಖ್ಯೆ ಹೆಚ್ಚಾಗುತ್ತಿದೆ.

ಆಸ್ಪತ್ರೆಯ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಕರ್ತವ್ಯದಲ್ಲಿರಬೇಕು. ಔಷಧಿಗಳನ್ನು ಸಂಗ್ರಹಣೆ ಮಾಡಿಕೊಳ್ಳಬೇಕು.

ಆಕ್ಸಿಜನ್ ಕೊಠಡಿಗಳನ್ನು ಬೇಗ ಪೂರ್ಣಗೊಳಿಸಬೇಕು. ಕರ್ತವ್ಯಲೋಪವೆಸಗುವವರನ್ನು ಕೂಡಲೇ ಬೇರೆ ಕಡೆಗೆ ವರ್ಗಾವಣೆ ಮಾಡಿ ಎಂದು ಸಂಸದ ವೈ. ದೇವೇಂದ್ರಪ್ಪ ತಾಕೀತು ಮಾಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ವೈದ್ಯಾಧಿಕಾರಿ ವೆಂಕಟೇಶ್, ಮುಖಂಡರಾದ ಯರಬಳ್ಳಿ ಉಮಾಪತಿ, ಪುಣಭಘಟ್ಟ ಬಾಲಚಂದ್ರಯ್ಯ, ಸತೀಶ್, ಪೂಜಾರ್ ಮರಿಯಪ್ಪ ಹಾಗೂ ಕೊಟ್ರೇಶ್ ಹಾಜರಿದ್ದರು.

# ಕೊರೊನಾ - ಭಯ ಬಿಡಿ

ಮತ್ತೆ ಮರುಕಳಿಸಿತೆ- ಹೆಮ್ಮಾರಿ ಕೊರೊನಾ ??
ಅಲ್ಲೋಲ ಕಲ್ಲೋಲವಾಗಿದೆ ದೈನಂದಿನ ಜೀವನ
ಸೂಕ್ಷ್ಮಾತಿ ಸೂಕ್ಷ್ಮ ಜೀವಿಯಿಂದ
ಬುದ್ದಿವಂತ ಜೀವಿ ಹೈರಾಣ

ಹೊಸ ಹೊಸ ರೂಪ ತಾಳುತ್ತಿರುವ ವೈರಾಣು
ಲಸಿಕೆಗೂ ಸ್ಪಂದಿಸುತ್ತಿಲ್ಲವೆಂಬ ಊಹಾಪೋಹದ ನುಡಿಗಳು
ಹೆಮ್ಮಾರಿಗೆ ಸಿಲುಕಿ ಪ್ರಾಣತೆತ್ತರು
ಬದುಕಿಬಾಳಬೇಕಿದ್ದ ಜನಸಾಮಾನ್ಯರು


ರೂಪಾಂತರಗೊಂಡ ಜೀವಿಯ ಎರಡನೇಯ ಅಲೆ
ನವನವೀನ ರೋಗ ಲಕ್ಷಣಗಳ ಸರಮಾಲೆ
ಬಲಿಯಾದ ಜೀವಿಗಳನ್ನೊಮ್ಮೆ ಮನಗಳಲ್ಲಿ ಸ್ಮರಿಸಿ
ರೋಗ ನಿರ್ಮೂಲನೆಗಾಗಿ ಒಟ್ಟಿಗೆ ಶ್ರಮಿಸೋಣ

ಜವಾಬ್ದಾರಿಯುತ ಪ್ರಜೆಗಳಾಗಿ ಪಾಲಿಸೋಣ ನಿಯಮ
ಹೆದರದೆ- ಅಂಜದೆ- ಕಳೆದುಕೊಳ್ಳದೆ ಸಂಯಮ
ಮಾಸ್ಕ್ - ಸ್ಯಾನಿಟೈಸರ್- ಸಾಮಾಜಿಕ ಅಂತರಗಳ ಸ್ತೋತ್ರ
ಹೆಮ್ಮಾರಿಯ ವಿರುದ್ಧ ಹೋರಾಡಲು ಸೂಕ್ತ ಸೂತ್ರ

ಬನ್ನಿ ಬನ್ನಿ ಸಮರಕ್ಕೆ ಸಜ್ಜಾಗಿ
ಸೂಕ್ತವಾದ ಅಸ್ತ್ರಗಳ ನ್ನು ಬಾಳಿನಲ್ಲಿ ಅಳವಡಿಸಿ
ಒಗ್ಗಟ್ಟಾಗಿ ಇಲ್ಲವಾಗಿಸೋಣ 'ಕೊರೊನಾ' ಎಂಬ ಭಯ
ಲಾಕ್ಡೌನ್- ನೈಟ್ಕರ್ಫ್ಯೂ ಎಂಬ ಸರ್ಕಾರದ ಹೇಳಿಕೆಗಳಿಗೆ ಸ್ಪಂದಿಸಿ

**- ಡಾ. ದೀಪಶ್ರೀ ಪ್ರಮೋದ್ ಗುಜ್ಜರ್**
ದಂತ ವೈದ್ಯರು, ಬಾಪೂಜಿ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ದಾವಣಗೆರೆ

# ಮಲೇಬೆನ್ನೂರು : ಚರಂಡಿ ಸ್ವಚ್ಛತೆಗೆ ಒತ್ತಾಯ



ಮಲೇಬೆನ್ನೂರು, ಮೇ 1- ಪಟ್ಟಣದ ರಾಜ ಕಾಲುವೆಗಳಲ್ಲಿ ಹೂಳು ತುಂಬಿಕೊಂಡಿರುವ ಕಾರಣ ಚರಂಡಿ ನೀರು ಎಲ್ಲೆಂದರಲ್ಲಿ ಹರಿಯುತ್ತಿದ್ದು, ಸಾರ್ವಜನಿಕರು ಪುರಸಭೆಯವರ ನಿರ್ಲಕ್ಷ್ಯಕ್ಕೆ ಬೇಸರ ವ್ಯಕ್ತಪಡಿಸಿದ್ದಾರೆ. ಇಲ್ಲಿನ ಬಸ್ ನಿಲ್ದಾಣದ ಪಕ್ಕದಲ್ಲಿರುವ ರಾಜ ಕಾಲುವೆಯಲ್ಲಿ ಕಸ ತುಂಬಿಕೊಂಡಿರುವುದರಿಂದ ಮತ್ತು ಚರಂಡಿ ಗಳ ನೀರು ಸರಾಗವಾಗಿ ಮುಂದೆ ಹೋಗದ ಕಾರಣ ದರ್ಗಾ ರಸ್ತೆಯಲ್ಲಿರುವ ಬಯಲು ಜಾಗದಲ್ಲಿ ಚರಂಡಿ ನೀರು ತುಂಬಿಕೊಂಡಿದೆ. ಇದರಿಂದಾಗಿ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇದ್ದು, ಪುರಸಭೆಯವರು ಕೂಡಲೇ ಗಮನ ಹರಿಸಿ ಚರಂಡಿಗಳನ್ನು ಸ್ವಚ್ಛಗೊಳಿಸಿ, ಚರಂಡಿ ನೀರು ಚರಂಡಿ ಮೂಲಕವೇ ಪಟ್ಟಣದ ಹೊರಗಡೆ ಹೋಗುವಂತೆ ಮಾಡಿ ಎಂದು ಸ್ಥಳೀಯ ನಾಗರಿಕರು ಒತ್ತಾಯಿಸಿದ್ದಾರೆ.

# ಮರಣ ಮೃದಂಗ

ಕನಸು ತುಂಬಿದ ಕಣ್ಣುಗಳಲ್ಲೀಗ
ಆತಂಕದ ಛಾಯೆ ಮನೆ ಮಾಡಿದೆ
ಭಾರಿಸುತಿದೆ ಮರಣ ಮೃದಂಗ
ಉಸಿರಾಡಲು ಭಯವಾಗುತಿದೆ
ಸಾವು ಪಕ್ಕದಲ್ಲಿಯೇ ಕಾದು ಕೂತಂತಿದೆ

ಹತ್ತಿರದವರಿಗೂ ಹೇಳಲಾಗುತ್ತಿಲ್ಲ ವಿದಾಯ
ಹಾರ, ತುರಾಯಿ ದೂರ
ಅಂತಿಮ ಬೀಳ್ಕೊಡುಗೆಯೂ ದುಸ್ತರ
ಅಂತ್ಯಕ್ರಿಯೆಯಲ್ಲೂ ಹಣದ ಹಾಹಾಕಾರ
ಸತ್ತ ಮೇಲೂ ನಿಲ್ಲದ ಅನ್ಯಾಯ

ಆರುತ್ತಿದೆ ಮನೆಯ ಬೆಳಕು
ಕತ್ತಲಿನತ್ತ ಸಾಗುತ್ತಿರುವ ಬದುಕು
ಹೊತ್ತಿ ಉರಿಯುತ್ತಿದೆ ಒಡಲು
ಕಳೆದುಕೊಂಡು ಆಸರೆಯ ಹೆಗಲು
ಮಾರಣಹೋಮಕ್ಕೆ ಬಲಿಯಾಗುತ್ತಿರುವ ಬಾಳು

**- ಅನುಪಮ ವಿರುಪಾಕ್ಷಪ್ಪ**
ದಾವಣಗೆರೆ.

# ಬಿರುಗಾಳಿ ಸಹಿತ ಮಳೆ: ಅಪಾರ ನಷ್ಟ



ಹರಪನಹಳ್ಳಿ, ಮೇ 1- ತಾಲ್ಲೂಕಿನ ವಿವಿಧೆಡೆ ಬಿರುಗಾಳಿ ಸಹಿತ ಮಳೆಯಾಗಿದ್ದು, ಅಕಾಲಿಕ ಮಳೆಯಿಂದ ಭಾರೀ ನಷ್ಟವಾಗಿದೆ. ತಾಲ್ಲೂಕಿನ ಹಳ್ಳಿಕೇರಿ ಗ್ರಾಮದಲ್ಲಿ ಸುರಿದ ಮಳೆಗೆ ಭಾರೀ ಗಾತ್ರದ ಮರಗಳು ನೆಲಕ್ಕುರುಳಿವೆ. ವಿದ್ಯುತ್ ಕಂಬಗಳು ಹಾಗೂ ತಂತಿಗಳು ನೆಲಕ್ಕೆ ಬಿದ್ದು, ವಿದ್ಯುತ್ ಕಡಿತಗೊಂಡಿದೆ. ಗ್ರಾಮದ ಕೆಲಮನೆಗಳ ತಗಡುಗಳು ಗಾಳಿಗೆ ಹಾರಿ ಹೋಗಿವೆ. ತಾಲ್ಲೂಕಿನ ಉಚ್ಚಂಗಿದುರ್ಗದಲ್ಲಿ ಕೂಡ ಬಿರುಗಾಳಿ ಸಮೇತ ಮಳೆಯಾಗಿದೆ. ಬಿಸಿಲಿನಿಂದ ತತ್ತರಿಸಿದ ಜನಕ್ಕೆ ಈ ಮಳೆ ತಂಪೆರೆದಂತಾಗಿದೆ.

# ನಾಲೆ, ನದಿಯಲ್ಲಿ 2 ಶವಗಳ ಪತ್ತೆ

ಹರಿಹರ, ಮೇ 1- ಮಿಟ್ಲಕಟ್ಟೆ ಗ್ರಾಮದ ಆಕಾಶ್ ರೈಸ್ ಮಿಲ್ ಬಳಿ ಹಾದು ಹೋಗಿರುವ ಭದ್ರಾ ನಾಲೆ 10 ಉಪನಾಲೆಯಲ್ಲಿ ಸುಮಾರು 60-65 ವರ್ಷ ವಯಸ್ಸಿನ ಅಪರಿಚಿತ ಮಹಿಳೆಯ ಶವವು ತೇಲಿಬಂದಿದೆ.

ತಲೆಯಲ್ಲಿ ಕೂದಲು ಇರುವುದಿಲ್ಲ. ಮೃತದೇಹ ಸಂಪೂರ್ಣ ಕೊಳೆತು ಹೋಗಿರುವುದರಿಂದ ಚಹರೆ ಗುರುತುಗಳು ಕಂಡುಬಂದಿರುವುದಿಲ್ಲ. ಯಾವುದೇ ಬಟ್ಟೆ ಅಥವಾ ವಸ್ತುಗಳಾಗಲಿ ಇರುವುದಿಲ್ಲ. ಸಂಬಂಧಪಟ್ಟವರು ಮಾಹಿತಿ ನೀಡಲು ಹರಿಹರ ಗ್ರಾಮಾಂತರ ಠಾಣೆ: 08192-272017, 9480803258 ಸಂಪರ್ಕಿಸುವುದು.

**ಅಪರಿಚಿತ ವ್ಯಕ್ತಿಯ ಶವ ಪತ್ತೆ :** ಹರಿಹರ ತಾಲ್ಲೂಕಿನ ದೀಟೂರು ಗ್ರಾಮದ ಹತ್ತಿರ ತುಂಗಭದ್ರಾ ನದಿಯಲ್ಲಿ ಸುಮಾರು 40 ವರ್ಷದ ಅಪರಿಚಿತ ವ್ಯಕ್ತಿಯ ಶವ ತೇಲಿ ಬಂದಿದ್ದು, ವ್ಯಕ್ತಿಯ ಮಾಹಿತಿ ತಿಳಿದಲ್ಲಿ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯನ್ನು ಸಂಪರ್ಕಿಸಲು ಕೋರಿದೆ. ಫೋನ್: 08192 272017, 9480803258.

# ರಾಜ್ಯದಲ್ಲಿ 4 ಲಕ್ಷ ದಾಟಿದ ಸಕ್ರಿಯ ಸೋಂಕು

**(1ನೇ ಪುಟದಿಂದ)** ಸೋಂಕಿತರ ಸಂಖ್ಯೆ 4.05 ಲಕ್ಷಕ್ಕೆ ತಲುಪಿದೆ. ಬೆಂಗಳೂರು ಒಂದರಲ್ಲೇ 19,353 ಸೋಂಕಿತರು ಕಂಡುಬಂದಿದ್ದಾರೆ ಎಂದು ಆರೋಗ್ಯ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಇದೇ ದಿನ 18,341 ಜನರು ಗುಣವಾಗಿ ಬಿಡುಗಡೆಯಾಗಿದ್ದಾರೆ.


## ಆರ್. ಚಮನ್ ಸಾಬ್ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ ವಾಸಿ **ಆರ್. ಚಮನ್ ಸಾಬ್** ಅವರು ದಿನಾಂಕ 1.5.2021 ರ ಶನಿವಾರ ಮಧ್ಯಾಹ್ನ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಶನಿವಾರ ಸಂಜೆ ಬೆಂಗಳೂರಿನಲ್ಲಿ ನೆರವೇರಿಸಲಾಯಿತು.

- ದುಃಖತಪ್ತ ಕುಟುಂಬ ವರ್ಗ

## ಹೊನ್ನಾಳ್ ಜಯಪ್ಪ ನಿಧನ



ದಾವಣಗೆರೆ ಜಿಲ್ಲೆ ಜಗಳೂರು ಹಾಲೇಕಲ್ಲು ಗ್ರಾಮದ ವಾಸಿ ಹೊನ್ನಾಳ್ ಜಯಪ್ಪ (73) ಇವರು ದಿನಾಂಕ 1.05.2021ರ ಶನಿವಾರ ಬೆಳಗ್ಗೆ 6 ಗಂಟೆಗೆ ನಿಧನರಾಗಿದ್ದಾರೆ. ಅಬಕಾರಿ ಡಿ.ವೈ.ಎಸ್.ಪಿ ಹೆಚ್.ಜೆ. ಅಶೋಕ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 1.5.2021ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಹಾಲೇಕಲ್ಲು ಗ್ರಾಮದಲ್ಲಿ ನೆರವೇರಿಸಲಾಯಿತು.

## ಶ್ರೀಮತಿ ಸುವರ್ಣಮ್ಮ ನಿಧನ



ದಾವಣಗೆರೆ ಆವರಗೆರೆ ಶೇಖರಪ್ಪ ಬಡಾವಣೆ ವಾಸಿ ಬಸವನಾಳ್ ರೇವಣ್ಣನವರ ಧರ್ಮಪತ್ನಿ ಶ್ರೀಮತಿ ಸುವರ್ಣಮ್ಮ (60) ಅವರು ದಿನಾಂಕ 01.05.2021 ರ ಶನಿವಾರ ಮಧ್ಯಾಹ್ನ 2 ಗಂಟೆಗೆ ನಿಧನರಾಗಿರುತ್ತಾರೆ. ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2.05.2021ರ ಭಾನುವಾರ ಬೆಳಗ್ಗೆ 11 ಗಂಟೆಗೆ ಆವರಗೆರೆ ರುದ್ರಭೂಮಿಯಲ್ಲಿ ನೆರವೇರಲಿದೆ.


**REQUIRED**
Full Time Qualified Nurses for a 100 Bed, Hospital -30 No's Fixed Salary, Accomadation & Food Provided. Qualification: BSc (Nursing), GNM Nursing
90354 85198, 80505 33389
Email: banakarasuvarna@gmail.com

**ಮನೆ ಬಾಡಿಗೆಗಿದೆ**
ಕೆ.ಬಿ. ಬಡಾವಣೆಯ ಕಿರುವಾಡಿ ಲೇಔಟ್‌ನಲ್ಲಿ ಮನೆ ಬಾಡಿಗೆಗಿದೆ.
98807 43838

**ಬೇಕಾಗಿದ್ದಾರೆ**
ಹೋಲ್ ಸೇಲ್ ಅಂಗಡಿಯಲ್ಲಿ ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಹುಡುಗ/ಹುಡುಗಿ PUC ಕಾಮರ್ಸ್ ಫೇಲ್/ಪಾಸ್ ಟ್ಯಾಲಿ ಆದವರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
ಶ್ರೀ ರೇವಣಸಿದ್ದೇಶ್ವರ ಟ್ರೇಡರ್ಸ್
ಚಾಮರಾಜಪೇಟೆ, ದಾವಣಗೆರೆ - 1.
78920 18341

**WANTED**
Female Nurses To Work In A Reputed Hospital In Davanagere. Accomadation Provided. Good Salary.
CALL US ON
80735 15690


**Wanted Dealers**
ANU Solar Pvt Ltd
P.J. Extn, Davanagere.
Contact
99645 11172
99649 68999

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**WANTED**
Tally Experience with 2-3 years Boys only
S.K. Trading Company
Chowkipete, Davangere.
Exclusive Salary
89041 33227

**ಶ್ರೀ ಅಣಿಗೆರೆಕಟ್ಟೆ ಜ್ಯೋತಿಷ್ಯ ಫಲ**
ಮೋಡಿ ಮಾಂತ್ರಿಕ ಗಿಡ್ಡಪ್ಪ
ಶ್ರೀ ಚೌಡೇಶ್ವರಿ ಭೂತರಾಯ ಆರಾಧಕರು. 48 ಗಂಟೆಯಲ್ಲಿ ಪರಿಹಾರ. ವಶೀಕರಣ, ಮನ:ಪ್ರೇತಬಾಧೆ, ಅಂಗುಷ್ಟ ವಶೀಕರಣ, ಇಷ್ಟಪಟ್ಟವರು ನಿಮ್ಮಂತೆ ಆಗಲು ನಮ್ಮಲ್ಲಿ ಶಾಶ್ವತ ಪರಿಹಾರ. ಸಂಪರ್ಕಿಸಿ :
9980770791, 9606818273


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 27.04.2021ರ ಮಂಗಳವಾರ ಬೆಳಿಗ್ಗೆ 11.30 ಕ್ಕೆ #459/1, ಡಾ|| ಎಂ.ಸಿ. ಮೋದಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆಯ ಮಗಳ ಗೃಹದಲ್ಲಿ ಲಿಂಗೈಕ್ಯರಾದ ಜಯದೇವ ಬೀಡಿ ಹಾಗೂ ವಾಗೀಶ ಬೀಡಿ ಕಂಪನಿ ಮಾಲೀಕರಾದ

**ಶ್ರೀ ಸಿದ್ಧರಾಮಯ್ಯ ಎಸ್. ಹನಗೋಡಿಮಠ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ ಹಾಗೂ ಅಂತ್ಯಕಾಲದಲ್ಲಿ ತಂದೆಯ ಸೇವೆಯನ್ನು, ಲಾಲನೆ-ಪಾಲನೆ, ಪೋಷಣೆಯನ್ನು ಅತ್ಯಂತ ಕಾಳಜಿಯಿಂದ ಮಾಡಿದ ಹಾಗೂ ಸಂಪ್ರದಾಯ ಜಂಗಮ ಪರಂಪರೆಯಂತೆ ಅಂತ್ಯಕ್ರಿಯಾದಿ ಕಾರ್ಯಗಳನ್ನು ಮಾಡಿದ
ಮಗಳು : **ಶ್ರೀಮತಿ ಸುಮನ್ ವಿ. ಕಟಗಿಹಳ್ಳಿಮಠ,**
ಅಳಿಯ : **ಶ್ರೀ ವಾಗೀಶ ಕಟಗಿಹಳ್ಳಿಮಠ,**
ಮೊಮ್ಮಕ್ಕಳಾದ : **ಚಿ|| ಸೋಹನ್ ವಿ. ಕಟಗಿಹಳ್ಳಿಮಠ, ಚಿ|| ಧವನ್ ವಿ. ಕಟಗಿಹಳ್ಳಿಮಠ** ಹಾಗೂ
ಆರೈಕೆ ಸಹಾಯಕರಾಗಿ ಸೇವೆ ಸಲ್ಲಿಸಿದ **ಹನುಮಂತ ಸಿ. ಸಿಂಗ್ರಿಹಳ್ಳಿ** ಇವರಿಗೆ ನಮ್ಮ ಧನ್ಯವಾದಗಳು.

- ✦ಶ್ರೀ ಸ್ವಾಮಿ ಡ್ರೈವಿಂಗ್ ಸ್ಕೂಲ್
- ✦ಡಿ.ವಿ.ಕೆ. ಆಟೋ ಕನ್ಸಲ್ಟೆಂಟ್ಸ್
- ✦ಎಸ್.ವಿ.ಕೆ. ಸೋಶಿಯಲ್ ಸರ್ವೀಸ್
- ✦ಯುನಿಕ್ ಲಾ ಅಸೋಸಿಯೇಷನ್

ಮೊ. : 98440 15114, 83100 73553

## ಸವಿನೆನಪು



**ದಿ|| ಶ್ರೀಮತಿ ಆರ್. ರೇಣುಕಾ**
ನಿಧನ : 02.05.2018
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,

**ಪತಿ : ಎಸ್. ಸಿದ್ದಪ್ಪ ಮತ್ತು ಮಕ್ಕಳು, ಕೊಡಗನೂರು.**

## ಪ್ರಭಾಕರ್ ಕೆ.ಜಿ. ನಿಧನ



ಜನನ : 10.10.1965
ಮರಣ : 01.05.2021

ಕೊಡಗನೂರು ವಾಸಿ, ಮೆಕ್ಕೆಜೋಳದ ಉದ್ಯಮಿ **ಪ್ರಭಾಕರ್ ಕೆ.ಜಿ.** (54) ಇವರು ದಿ. 01.05.2021 ರ ಶನಿವಾರ ಬೆಳಿಗ್ಗೆ 6.30 ಗಂಟೆಗೆ ನಿಧನರಾಗಿರುತ್ತಾರೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿ. 01.05.2021ರ ಶನಿವಾರ ಸಂಜೆ 5.30ಕ್ಕೆ ಕೊಡಗನೂರಿನ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಯಿತು.

## ಶಿವಾನಂದಪ್ಪ ಬೆಲ್ಲದ ನಿಧನ



ಜನನ 01.03.1936
ಮರಣ 1.05.2021

ದಾವಣಗೆರೆ ವಿದ್ಯಾನಗರ ವಾಸಿ (#3912 ಕೆನರಾ ಬ್ಯಾಂಕ್ ಎದುರು)
**ಶ್ರೀ ಶಿವಾನಂದಪ್ಪ ಎಸ್. ಬೆಲ್ಲದ** (85)
(Retd AEE, National Highway, Davanagere)
ಅವರು ದಿನಾಂಕ 1.05.2021ರ ಶನಿವಾರ ಬೆಳಗ್ಗೆ 9.40ಕ್ಕೆ ಬೆಂಗಳೂರಿನ ಸ್ವಗೃಹದಲ್ಲಿ ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಬೆಂಗಳೂರಿನಲ್ಲಿ ನೆರವೇರಿಸಲಾಯಿತು.

ಇಂತಿ ದುಃಖತಪ್ತ : **ಶ್ರೀಮತಿ ಗುರುಶಾಂತಮ್ಮ ಶಿವಾನಂದಪ್ಪ ಬೆಲ್ಲದ (ಪತ್ನಿ)**
**ಶ್ರೀ ದಿನೇಶ್ ಬೆಲ್ಲದ (ಪುತ್ರ), ಮೊ: 98860 58823**

# ರಾಶಿ ಭವಿಷ್ಯ

**ದಿನಾಂಕ : 02.05.2021 ರಿಂದ 08.05.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಮತ್ತೊಬ್ಬರೊಂದಿಗೆ ವ್ಯವಹರಿಸುವಾಗ ಬಹಳ ಎಚ್ಚರದಿಂದಿರುವುದು ಮೇಲು. ಹೆಚ್ಚು ಬಂಡವಾಳವನ್ನು ಬೇಡುವ ಹೊಸ ಯೋಜನೆಗಳನ್ನು ಕೆಲಕಾಲ ಮುಂದೂಡುವುದು ಉತ್ತಮ. ವಿದ್ಯಾರ್ಥಿಗಳ ಪರಿಶ್ರಮಕ್ಕೆ ತಕ್ಕಂತೆ ಫಲಿತಾಂಶ ಬರಲಿದೆ. ಸಂಘ-ಸಂಸ್ಥೆಗಳವರು ದೇಣಿಗೆ ಬರುವರು. ಕೌಟುಂಬಿಕ ಸಾಮರಸ್ಯವನ್ನು ಸಾಧಿಸಲು ಹರಸಾಹಸ ಪಡುವಿರಿ. ವಿದೇಶಿ ವ್ಯವಹಾರಗಳ ಕಡೆ ಹೆಚ್ಚಿನ ಗಮನವಿಡಿ. ಹಿರಿಯರ ಮಾತನ್ನು ಗೌರವಿಸುವುದನ್ನು ಕಲಿಯಿರಿ.ಆರೋಗ್ಯದ ವಿಷಯದಲ್ಲಿ ಉದಾಸೀನತೆ ಬೇಡ. ಬರಬೇಕಾಗಿರುವ ಬಾಕಿ ಹಣ ನಿಮ್ಮ ಕೈಸೇರಲಿದೆ. ಭಾನು -ಸೋಮ -ಮಂಗಳ – ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಮಹಿಳಾ ಕೈಗಾರಿಕೋದ್ಯಮಿಗಳು ತಮ್ಮ ವಲಯಗಳಲ್ಲಿ ಹೆಚ್ಚಿನ ಪ್ರಭಾವ ಬೀರುವರು. ಅಪರೂಪಕ್ಕೆ ಆಗಮಿಸುವ ಆತ್ಮೀಯರಿಂದಾಗಿ ಮನೆಯಲ್ಲಿ ಹಬ್ಬದ ವಾತಾವರಣ ಮೂಡಲಿದೆ. ಸಾಮಾಜಿಕ ಮನ್ನಣೆ, ಗೌರವ, ಪ್ರತಿಷ್ಠೆ, ಹೆಚ್ಚಲಿದೆ. ಭೂ ಸಂಬಂಧಿ ವ್ಯವಹಾರದಲ್ಲಿ ಸ್ವಲ್ಪ ತೊಡಕುಂಟಾಗಲಿದೆ. ಚಿಕ್ಕಮಕ್ಕಳ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಅಲಕ್ಷಿಸಬೇಡಿ. ಆದಾಯದ ಮೂಲದಲ್ಲಿ ತುಸು ಕಡಿಮೆಯಾಗಲಿದೆ. ಗೆಳೆಯನ ಕುಟುಂಬದ ಸಮಸ್ಯೆಯೊಂದು ನಿಮ್ಮಿಂದ ಬಗೆಹರಿಯಲಿದೆ. ಸಾಧ್ಯವಾದಷ್ಟು ಗುರುಜಪ, ಗುರು ಚರಿತ್ರೆ ಪಾರಾಯಣ ಮಾಡಿ. ಗೋ ಸೇವೆಯಿಂದ ವಿಶೇಷ ಪುಣ್ಯ ಲಭಿಸುವುದು. ಸೋಮ -ಬುಧ -ಶುಕ್ರ -ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಮಕ್ಕಳು ವಿದ್ಯಾಭ್ಯಾಸದಲ್ಲಿ ತೋರುವ ಅಲಕ್ಷೆ ನಿಮ್ಮನ್ನು ಆತಂಕಕ್ಕೀಡು ಮಾಡಲಿದೆ. ಅವರನ್ನು ಸರಿದಾರಿಗೆ ತರಲು ಹರಸಾಹಸಪಡಬೇಕಾದೀತು. ಕೆಲಸ ಕಾರ್ಯಗಳಲ್ಲಿ ಕಂಡುಬರುವ ದ್ವಂದ್ವಗಳಿಂದ ಹೊರಬರಲು, ದೃಢ ನಿರ್ಧಾರಗಳಿಂದ ಮಾತ್ರ ಸಾಧ್ಯ. ಕೋರ್ಟು-ಕಛೇರಿ ವ್ಯಾಜ್ಯಗಳನ್ನು ನ್ಯಾಯಾಲಯದ ಹೊರಗೆ, ರಾಜೀ ಪಂಚಾಯ್ತಿ ಮೂಲಕ ಬಗೆಹರಿಸಿಕೊಳ್ಳುವುದು ಉತ್ತಮ. ಆದಾಯದ ಮೂಲದಲ್ಲಿ ಕೊರತೆ ಕಂಡು ಬಂದರೂ ಚಿಂತೆಬೇಡ. ಮಹಿಳೆಯರಿಗೆ ತವರುಮನೆಯಿಂದ ನೆರವು ದೊರೆಯಲಿದೆ. ಮದುವೆ ಮಾತುಕತೆ ಕಾರಣಾಂತರಗಳಿಂದ ಮುಂದೆ ಹೋಗಬಹುದು. ಹಿರಿಯರ ಅನುಭವಯುಕ್ತ ಮಾತುಗಳು ಮುಂದೆ ನಿಮಗೆ ಪ್ರಯೋಜನವಾಗಲಿವೆ. ಸೂರ್ಯೋಪಾಸನೆ ಮಾಡುವುದು ಉತ್ತಮ. ಬುಧ-ಗುರು-ಶುಕ್ರ -ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಬರಬಹುದಾದ ಹಣವನ್ನು ನೆಚ್ಚಿಕೊಂಡು ಹೊಸ ಯೋಜನೆಗಳನ್ನು ಹಮ್ಮಿಕೊಳ್ಳುವುದಕ್ಕಿಂತ, ಅದು ಕೈಸೇರಿದ ಮೇಲೆ, ಆರಂಭಿಸುವುದು ಉತ್ತಮ. ಇದರ ಪ್ರಯೋಜನ ಮುಂದೆ ನಿಮಗೆ ಕಾಣಲಿದೆ. ನಿರುದ್ಯೋಗಿಗಳು ಸದ್ಯದ ಮಟ್ಟಿಗೆ ಸಿಕ್ಕ ಕೆಲಸಕ್ಕೆ ಹೋಗುವುದು ಲೇಸು. ಅಲ್ಪವೇತನವಾದರೂ ಉತ್ತಮ ಅನುಭವ ದೊರೆಯಲಿದೆ. ಶೀತಬಾಧೆ ಸತತ ನಿಮ್ಮನ್ನು ಬಾಧಿಸಬಹುದು. ಅತಿಯಾದ ಪರಾವಲಂಬನೆ ಅಷ್ಟು ಒಳ್ಳೇದಲ್ಲ. ಬಂಧುಗಳೊಂದಿಗೆ ಕಟ್ಟಿಕೊಳ್ಳುವ ದ್ವೇಷ ಭವಿಷ್ಯದ ದೃಷ್ಟಿಯಿಂದ ನಿಮಗೇ ಮಾರಕವಾಗಲಿದೆ. ವ್ಯವಹಾರದಲ್ಲಿ ಸಾಧ್ಯವಾದಷ್ಟು ರಕ್ಷಣಾತ್ಮಕವಾಗಿರುವುದು ಲೇಸು. ಹಣವು ಪೋಲಾಗದಂತೆ ಎಚ್ಚರ ವಹಿಸಿ. ಸೋಮ -ಬುಧ -ಗುರು -ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಬೇರೆಯವರ ಬಗ್ಗೆ ಪಿತೂರಿ ಮಾಡಲು ಹೋಗಿ ನೀವೇ ತೊಂದರೆಗೆ ಸಿಲುಕಬಹುದು. ಹಿತಶತ್ರುಗಳಿಂದ ಸಾಧ್ಯವಾದಷ್ಟು ಅಂತರ ಕಾಪಾಡಿಕೊಳ್ಳಿ. ಹೊಸ ಯೋಜನೆಗಳಿಗೆ ಆರ್ಥಿಕ ಸಂಪನ್ಮೂಲವನ್ನು ಕಂಡುಕೊಳ್ಳುವಿರಿ. ಅವಿವಾಹಿತರಿಗೆ ಕಂಕಣಭಾಗ್ಯ ಇಷ್ಟರಲ್ಲೇ ಕೂಡಿಬರಲಿದೆ. ಸ್ನೇಹಿತರು ಕೊಡಬಹುದಾದ ಸಲಹೆಗಳ ಫಲಾನುಭವಿಗಳು ನೀವಾಗುವಿರಿ. ವ್ಯಾಪಾರದಲ್ಲಿ ತುಸು ನಷ್ಟವಾದರೂ ಚಿಂತೆಬೇಡ. ಆದಾಯಕ್ಕೆ ತಕ್ಕಂತೆ ಖರ್ಚು - ವೆಚ್ಚಗಳನ್ನು ರೂಢಿಸಿಕೊಳ್ಳುವುದು ಉತ್ತಮ. ಬೇರೆಯವರ ಸಾಲಸೋಲಗಳಿಗೆ ಜಾಮೀನಾಗಲು ಹೋಗಬೇಡಿ. ಕ್ರೀಡಾಪಟುಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ಭಾನು -ಮಂಗಳ- ಬುಧ -ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ನೀವು ಶಾಸ್ತ್ರ ಪಂಡಿತರಾಗಿದ್ದಲ್ಲಿ, ಅನೇಕ ವಾಕ್ಯಾರ್ಥಗೋಷ್ಠಿಗಳಲ್ಲಿ ಭಾಗವಹಿಸಿ ಉತ್ತಮ ಪ್ರಬಂಧಗಳನ್ನು ಮಂಡಿಸಿ, ಸನ್ಮಾನಗಳನ್ನು ಪಡೆಯುವಿರಿ. ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ಪಡೆದು, ಪೋಷಕರ ಹಾಗೂ ಬಂಧುಗಳ ಮೆಚ್ಚುಗೆ ಪಡೆಯುವರು. ನಂಜುಗುಳುವ ನಾಲಿಗೆಯಿಂದಾಗಿ ಸಂಬಂಧಗಳಿಗೆ ಧಕ್ಕೆ ಬರಬಹುದು. ಖರ್ಚು -ವೆಚ್ಚಗಳಿಗೆ ತಕ್ಕಷ್ಟು ಆದಾಯವಿರುವುದರಿಂದ, ಉಳಿತಾಯ ಕಷ್ಟವಾಗಬಹುದು. ಸೋದರನು ಉದ್ಯೋಗ ಬದಲಾವಣೆಗೆ ಯತ್ನಿಸುವನು. ಉತ್ತಮ ಸಂಗೀತಗಾರರು, ಕಾಣದ ಕೈಯೊಂದರ ಒಳಸಂಚಿನಿಂದಾಗಿ, ಅವಕಾಶವಂಚಿತರಾಗುವರು. ಹಳೇ ರೋಗಗಳು ಮತ್ತೆ ಮರಕಳಿಸದಂತೆ ಎಚ್ಚರ ವಹಿಸಿ. ಮತ್ತೊಬ್ಬರನ್ನು ಮೆಚ್ಚಿಸುವ ಸಾಹಸಮಾಡಲು ಹೋಗಬೇಡಿ. ಮಂಗಳ -ಬುಧ -ಶುಕ್ರ -ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಕೆಲಸ ಮಾಡುವ ಸ್ಥಳಗಳಲ್ಲಿ ಕೈ-ಬಾಯಿಗಳನ್ನು ಶುದ್ಧವಾಗಿಟ್ಟುಕೊಳ್ಳುವುದರಿಂದ ಯಜಮಾನನ ಮೆಚ್ಚುಗೆ ಪಡೆಯುವರು. ಈ ಪ್ರಾಮಾಣಿಕತೆ ಮುಂದೆ ಉತ್ತಮ ಜೀವನಕ್ಕೆ ದಾರಿಯಾಗಲಿದೆ. ಶುದ್ಧ ಚಾರಿತ್ರ್ಯವನ್ನು ಕಾಪಾಡಿಕೊಳ್ಳುವುದರ ಕಡೆ ಹೆಚ್ಚಿನ ಗಮನ ಕೊಡುವುದು ಉತ್ತಮ. ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸಲು ಇದು ಸರಿ ಯಾದ ಸಮಯ. ಚಾಡಿಮಾತು ನಿಮಗೇ ತಿರುಗುಬಾಣವಾದೀತು. ಬದುಕು ಸಾಗಿ ಸುವಷ್ಟು ಸಂಪಾದನೆಯಾಗುವುದರಿಂದ ಚಿಂತೆಬೇಡ. ಸಾಧ್ಯವಾಷ್ಟು ಗುರು-ಹಿರಿಯರ ಸೇವೆ ಮಾಡುವುದು ಲೇಸು. ಗಣೇಶನನ್ನು ದರ್ಜೆಯಿಂದ ಪೂಜೆ ಮಾಡಿರಿ. ನಿರುದ್ಯೋಗಿ ಗಳಿಗೆ ಉದ್ಯೋಗದ ಭರವಸೆ ಸಿಗಲಿದೆ. ಸೋಮ -ಬುಧ -ಶುಕ್ರ - ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯು.)**

ಸ್ವಂತ ಉದ್ಯಮವನ್ನು ಬಹಳ ಉತ್ಸಾಹದಿಂದ ಆರಂಭಿಸಿದ್ದ ನಿಮಗೆ, ಅನೇಕ ತೊಡಕುಗಳು ಎದುರಾಗಲಿದ್ದು, ನಿಮ್ಮ ತಾಳ್ಮೆ, ಉತ್ಸಾಹ, ಧೈರ್ಯವನ್ನು ಪರೀಕ್ಷಿಸಲಿದೆ. ಅನಾವಶ್ಯಕ ಓಡಾಟ, ಆರೋಗ್ಯದ ಮೇಲೆ ಅಡ್ಡಪರಿಣಾಮ ಬೀರಬಹುದು. ಮನೆಯಲ್ಲಿ ಹಿರಿಯರ ಅಸಹಕಾರ ನಿಮ್ಮನ್ನು ವಿಚಲಿತರನ್ನಾಗಿಸಬಹುದು. ಆಸ್ತಿ ಖರೀದಿಯಂತಹ ವಿಚಾರಗಳನ್ನು ಕೆಲಕಾಲ ಮುಂದೂಡುವುದು ಉತ್ತಮ. ಹಣದ ಹರಿವು ಸಾಧಾರಣವಾಗಿರುವುದರಿಂದ, ಅಗತ್ಯಗಳಿಗೆ ತಕ್ಕಂತೆ ಖರ್ಚು ಮಾಡುವುದನ್ನು ರೂಢಿಸಿಕೊಳ್ಳಿ. ಸಾಧ್ಯವಾದಷ್ಟು ಗುರು ಚರಿತ್ರೆ, ವಿಷ್ಣು ಸಹಸ್ರನಾಮ ಪಠಿಸುವುದು ಉತ್ತಮ. ಭಾನು -ಮಂಗಳ -ಗುರು- ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಈ ಹಿಂದೆ ಸಾಲಕೊಟ್ಟವರು ನಿಮ್ಮ ಕಿಬ್ಬದಿಯ ಕೀಲಿ ಮುರಿಯಲು ಬರುವ ಮೊದಲೇ, ಅದನ್ನು ತೀರಿಸಲು ಒಂದು ವ್ಯವಸ್ಥೆ ಮಾಡುವುದು ಲೇಸು. ತುಸು ಕಾಲಾವಕಾಶ ದೊರೆಯುವ ಸಂಭವವಿದೆ. ಕೃಷಿ ಉಪಕರಣಗಳ ತಯಾರಕರಿಗೆ ಹಾಗೂ ಅದರ ಮಾರಾಟಗಾರರಿಗೆ ವಹಿವಾಟು ಹೆಚ್ಚಿ, ಅಧಿಕ ಲಾಭವಾಗಲಿದೆ. ಕೃಷಿಕ ಮಿತ್ರರು, ಬೇಸಾಯದಲ್ಲಿ ನವೀನ ರೀತಿಯನ್ನು ಅಳವಡಿಸಿಕೊಳ್ಳುವುದು ಉತ್ತಮ. ವಿದ್ಯಾರ್ಥಿಗಳು ಉತ್ತಮ ಅವಕಾಶಗಳನ್ನು ಸ್ವಲ್ಪದರಲ್ಲಿಯೇ ತಪ್ಪಿಸಿಕೊಳ್ಳುವರು. ಹಾಗೆಂದ ಮಾತ್ರಕ್ಕೆ ಚಿಂತೆಬೇಡ. ಮಹಾಲಕ್ಷ್ಮಿಯನ್ನು ವಿಶೇಷವಾಗಿ ಆರಾಧಿಸಿದಲ್ಲಿ ಕಷ್ಟಗಳು ಕಳೆಯಲಿವೆ. ಗುರು -ಶುಕ್ರ -ಶನಿ -ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಸಣ್ಣ-ಪುಟ್ಟ ವಿಷಯಗಳಿಗೂ ಕೋಪಗೊಳ್ಳುವ ಅಥವಾ ರೇಗಾಡುವ ನಿಮ್ಮ ಈ ಸ್ವಭಾವ ಮನೆಯ ಸದಸ್ಯರಿಗೆ ಕಿರಿಕಿರಿಯನ್ನುಂಟು ಮಾಡಬಹುದು. ಇದರಿಂದ ಮನೆಯಲ್ಲಿ ಅಶಾಂತಿ ವಾತಾವರಣ ಉಂಟಾಗಲಿದೆ. ನೂತನ ವಿವಾಹಿತ ದಂಪತಿಗಳ ನಡುವೆ ಇದ್ದ ಅನುಮಾನ-ಮನಸ್ತಾಪಗಳು ದೂರವಾಗಿ ಸಾಮರಸ್ಯ ಮೂಡಲಿದೆ. ಜೊತೆಗೆ, ನಿರೀಕ್ಷಿತ ಶುಭ ಸಮಾಚಾರವೂ ಕೇಳಿ ಬರಲಿದೆ. ಭೂಮಿಗೆ ಸಂಬಂಧಿಸಿದ ವ್ಯವಹಾರದಲ್ಲಿ ಸಾಕಷ್ಟು ಲಾಭ ದೊರೆಯಲಿದೆ. ಪರಿವಾರದೊಂದಿಗೆ ಪುಣ್ಯಕ್ಷೇತ್ರಗಳ ದರ್ಶನ ಮಾಡುವಿರಿ. ರೈತಾಪಿ ಜನರಿಗೆ ಸರ್ಕಾರದಿಂದ ಬರಬೇಕಾಗಿರುವ ಸೌಲಭ್ಯಗಳು ದೊರೆಯಲಿವೆ. ಸೋಮ – ಮಂಗಳ -ಶನಿ – ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**


ನಿಮಗೆ ಎಷ್ಟೇ ಆರ್ಥಿಕ ಬಿಕ್ಕಟ್ಟಿದ್ದರೂ ಕೂಡ, ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ. ಯಾರಾದರೂ ನಿಮ್ಮನ್ನು ತುಂಬಾ ಹೊಗಳಿದರೆ, ಅವರು ನಿಮ್ಮಿಂದ ಹಣ-ಕಾಸಿನ ನೆರವು ಕೋರಲು ಬಂದಿದ್ದಾರೆಂದೇ ಅರ್ಥ. ಹಿತಶತ್ರುಗಳ ವಿಚಾರದಲ್ಲಿ ಉದಾಸೀನತೆ ಸಲ್ಲದು. ಹೊಸಮನೆ ಕಟ್ಟುವ ವಿಚಾರವಿದ್ದಲ್ಲಿ ಈಗ ಪ್ರಯತ್ನಿಸಬಹುದು. ಲೆಕ್ಕಪರಿಶೋಧಕರಿಗೆ ಬಿಡುವಿಲ್ಲದ ಕೆಲಸ. ಹಳೇ ಮಿತ್ರರ ಭೇಟಿಯಿಂದ ಮನಸ್ಸು ಸಂತಸಗೊಳ್ಳಲಿದೆ. ಅತಿಯಾದ ಮನರಂಜನೆ ಅಥವಾ ಅತಿ ಭೋಜನ ಕೂಡ ಆರೋಗ್ಯ ದೃಷ್ಟಿಯಿಂದ ಅಷ್ಟು ಒಳ್ಳೆಯದಲ್ಲ. ಖಾದ್ಯತೈಲ ವ್ಯಾಪಾರಿಗಳಿಗೆ ಹೆಚ್ಚಿನ ವಹಿವಾಟಿನಿಂದ ಲಾಭಾಧಿಕ್ಯವಾಗಲಿದೆ. ಬುಧ -ಶುಕ್ರ – ಶನಿ -ಶುಭ ದಿನಗಳು.

**ಮೀನ (ಪೂರ್ವಾಭಾದ್ರ, 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಖಂಡಿತವಾದಿ ಲೋಕವಿರೋಧಿ ಎಂಬ ಗಾದೆ ಮಾತಿನಂತೆ, ಮತ್ಯಾರದೋ ಸತ್ಯವನ್ನು ಬಯಲು ಮಾಡಲು ಹೋಗಿ ನೀವು ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ವಿದ್ಯಾವಂತ ಮಹಿಳಾ ನಿರುದ್ಯೋಗಿಗಳಿಗೆ ಉತ್ತಮ ವೇತನದ ನೌಕರಿ ದೊರೆಯಲಿದೆ. ಆರ್ಥಿಕ ಸಬಲತೆ, ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಲಿದೆ. ಚಿನಿವಾರ ಪೇಟೆಯಲ್ಲಿ ಹೆಚ್ಚಿನ ಚಟುವಟಿಕೆ ಕಂಡುಬರಲಿದೆ. ಸಿದ್ಧಪಡಿಸಿದ ಆಹಾರ ತಯಾರಕರಿಗೆ ಬೇಡಿಕೆ ಹೆಚ್ಚಲಿದೆ. ಕುಟುಂದ ಸದಸ್ಯರ ಬೆಂಬಲವಿಲ್ಲದೇ ಯಾವುದೇ ಹೊಸ ಕೆಲಸಗಳಿಗೆ ಕೈಹಾಕಬೇಡಿ. ಆದಾಯದ ಮೂಲದಲ್ಲಿ ಹೆಚ್ಚಳ ಕಂಡುಬರಲಿದ್ದು, ಉಳಿತಾಯದ ಬಗ್ಗೆ ಯೋಚಿಸಬಹುದು. ಅಪರಿಚಿತರೊಂದಿಗೆ ಹಣ-ಕಾಸಿನ ವ್ಯವಹಾರ ಖಂಡಿತಾ ಬೇಡ. ಭಾನು -ಸೋಮ -ಗುರು -ಶುಭ ದಿನಗಳು.

# ದುಡಿಯುವ ಜನರ ಬದುಕು, ದುಡಿಮೆಯ ಹಕ್ಕು ರಕ್ಷಿಸಿ

**ಎಐಯುಟಿಯುಸಿಯಿಂದ ಮೇ ದಿನಾಚರಣೆ**



ದಾವಣಗೆರೆ, ಮೇ 1- ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ ಜಿಲ್ಲಾ ಸಮಿತಿ ವತಿಯಿಂದ ಆನ್ ಲೈನ್ ಮೂಲಕ ಇಂದು ಅಂತರರಾಷ್ಟ್ರೀಯ ಮೇ ದಿನ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಎಐಯುಟಿಯುಸಿ ರಾಜ್ಯ ಉಪಾಧ್ಯಕ್ಷ ಎಂ. ಶಶಿಧರ್ ಮಾತನಾಡಿ, ಕಳೆದ ವರ್ಷದ ಕರಾಳ ಲಾಕ್ ಡೌನ್ ನೆನಪುಗಳು ಇನ್ನೇನು ಮಾಸಿ ಮರೆಯಾಗುತ್ತಿವೆ ಎಂದುಕೊಳ್ಳುತ್ತಿರುವಾಗ ಸದ್ದಿಲ್ಲದೆ ಮತ್ತೊಮ್ಮೆ ಲಾಕ್ ಡೌನ್ ಭೀತಿ ದುಡಿಯುವ ಜನಕ್ಕೆ ಆವರಿಸುತ್ತಿದೆ. ಮತ್ತೆ ಮುಂಬೈನಂತಹ ನಗರಗಳಿಂದ ಹುಟ್ಟಿದೂರುಗಳಿಗೆ ವಲಸೆ ಕಾರ್ಮಿಕರು ಮರಳುವುದು, ಶಾಲಾ - ಕಾಲೇಜು-ಹಾಸ್ಟೆಲ್‌ಗಳನ್ನು ಬಂದ್ ಮಾಡಿರುವುದು, ದುಡಿಯುವವರು ಕೆಲಸದಿಂದ ವಜಾ ಆಗುತ್ತಿರುವ, ವೇತನ ಕಡಿತ ಮತ್ತಿತರೆ ಸಂಕಷ್ಟಗಳು ಎದುರಾಗಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಯಥಾ ರೀತಿ ಬಂಡವಾಳಶಾಹಿ ಮಾಲೀಕರ ಕಾರ್ಪೊರೇಟ್ ಮನೆತನಗಳ ಹಿತವನ್ನು ಕಾಪಾಡಲು ಲಜ್ಜೆಯಿಲ್ಲದೆ ರೈತ ವಿರೋಧಿ, ಕಾರ್ಮಿಕ ವಿರೋಧಿ ನೀತಿಗಳನ್ನು, ಕರಾಳ ಕಾಯ್ದೆಗಳನ್ನು ಅನುಸರಿಸುತ್ತಿವೆ. ಹೀಗೆ ದುಡಿಯುವವರ ಉದ್ಯೋಗ ಹಾಗೂ ಉದ್ಯೋಗದ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿರುವ ಅತ್ಯಂತ ಕೆಟ್ಟ ಸಂದರ್ಭದಲ್ಲಿ ಈ ಎಲ್ಲಾ ಅನಿಷ್ಟಗಳ ವಿರುದ್ಧ ಹೋರಾಡಲು ಸ್ಫೂರ್ತಿಯನ್ನು ನೀಡುವ ಐತಿಹಾಸಿಕ ಮೇ ದಿನ ಮತ್ತೆ ಬಂದಿದೆ. ದುಡಿಯುವ ವರ್ಗಕ್ಕೆ ಶಾಸನದತ್ತ ಸೌಲಭ್ಯಗಳನ್ನು ಹಾಗೂ ಹಕ್ಕುಗಳನ್ನು ತಂದುಕೊಡುವಲ್ಲಿ ಸ್ಫೂರ್ತಿಯಾದ ಮೇ ದಿನದ ಮಹತ್ವವನ್ನೇ ಆಳ್ವಿಕರು ಹೇಳ ಹೆಸರಿಲ್ಲದಂತೆ ಮಾಡಲು ಹೊರಟಿದ್ದಾರೆ. ದುಡಿಯುವ ಜನರನ್ನು ಮೇ ದಿನದ ಹೋರಾಟದ ಮುಂಚಿನ ದಿನಗಳಿಗೆ ಕೊಂಡೊಯ್ಯುವ ಹುನ್ನಾರ ನಡೆಸಿವೆ ಎಂದು ಆರೋಪಿಸಿದರು.

ಕೃಷಿ ಉತ್ಪನ್ನಗಳಿಗೆ ಯಾವುದೇ ಕನಿಷ್ಠ ಬೆಂಬಲ ಬೆಲೆಯ ಗ್ಯಾರಂಟಿ ನೀಡದ ಅಗತ್ಯ ವಸ್ತುಗಳ ಕಾಯ್ದೆಯನ್ನೂ ಸಹ ಮಂಡಿಸಲಾಗಿದೆ. ಇದರಿಂದ ಈಗಾಗಲೇ ಗಗನಕ್ಕೇರಿರುವ ಅಗತ್ಯ ವಸ್ತುಗಳ ಬೆಲೆ ಇನ್ನಷ್ಟು ಹೆಚ್ಚಾಗಲಿವೆ. ಕೃಷಿ ಕ್ಷೇತ್ರವನ್ನು ಅವಲಂಬಿಸಿದ ಕುಟುಂಬಗಳಿಗೆ ಮತ್ತು ಇತರೆ ದುಡಿಯುವ ಸಮುದಾಯಗಳಿಗೆ ಇದೊಂದು ದೊಡ್ಡ ಹೊಡೆತವಾಗಿದೆ. ಆಹಾರ ಭದ್ರತೆಯನ್ನು ಕಸಿಯುತ್ತದೆ. ಫ್ಯಾಸ್ಟ್ ವಾದಿ ಉದ್ದೇಶದಿಂದ ಕೂಡಿರುವ ರಾಷ್ಟ್ರೀಯ ಶಿಕ್ಷಣ ನೀತಿ 2020, ಕಡಿಮೆ ವರಮಾನದ, ದುಡಿಯುವ ಕುಟುಂಬಗಳಿಗೆ ಸೇರಿದ ಬಡ ಮತ್ತು ಕೆಳ ಮಧ್ಯಮ ವರ್ಗದ ವಿದ್ಯಾರ್ಥಿಗಳ ಜೀವನವನ್ನು ಅಧೋಗತಿಗೆ ತರಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಎಲ್ಲಾ ದುಡಿಯುವ ಜನರು ನಡೆಸುವ ಬಿಡಿ ಬಿಡಿಯಾದ ಹೋರಾಟಗಳನ್ನು ಒಂದು ಸುದೀರ್ಘ ಸುಸಂಬದ್ಧ ಐಕ್ಯ ಹೋರಾಟವನ್ನಾಗಿ ಬೆಳೆಸುವುದು ಅವಶ್ಯಕತೆಯಾಗಿದೆ. ಶೋಷಣೆಯ ಮೂಲ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೆಸೆದು ದುಡಿಯುವ ಜನರ ಅಧಿಕಾರವನ್ನು ಸ್ಥಾಪಿಸಲು ಸಮಾಜವಾದದತ್ತ ಸಾಗಬೇಕಿದೆ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಮಂಜುನಾಥ ಕೈದಾಳೆ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಮಂಜುನಾಥ ಕುಕ್ಕುವಾಡ ಪ್ರಾಸ್ತಾವಿಕವಾಗಿ ಮಾತನಾಡಿದರು. ತಿಪ್ಪೇಸ್ವಾಮಿ ಅಣಬೇರು ಸ್ವಾಗತಿಸಿದರು. ಎಲ್. ಹೆಚ್. ಪ್ರಕಾಶ್ ವಂದಿಸಿದರು.

ಆಶಾ ಕಾರ್ಯಕರ್ತೆಯರು, ಹಾಸ್ಟೆಲ್ ಕಾರ್ಮಿಕರು, ವಿಶ್ವವಿದ್ಯಾಲಯ ನೌಕರರು, ಯುಬಿಡಿಟಿ ಸಿ ಮತ್ತು ಡಿ ಗ್ರೂಪ್ ನೌಕರರು, ವಿಂಡ್ ಮಿಲ್ ಮತ್ತು ಸೋಲಾರ್ ಕಾರ್ಮಿಕರು ಸೇರಿದಂತೆ ನೂರಾರು ಜನ ಫೇಸ್ ಬುಕ್ ಮತ್ತು ಗೂಗಲ್ ಮೀಟ್‌ನಲ್ಲಿ ಭಾಗವಹಿಸಿದ್ದರು.

## 35ನೇ ವಾರ್ಡ್‌ನಲ್ಲಿ ಕಾರ್ಮಿಕರ ದಿನ



ದಾವಣಗೆರೆ, ಮೇ.1 - ವಾರ್ಡ್ ನಂ.35 ರಲ್ಲಿ ಕಾರ್ಮಿಕ ದಿನಾಚರಣೆಯನ್ನು ಪೌರ ಕಾರ್ಮಿಕರಿಗೆ ಹಾಗೂ ಕಟ್ಟಡ ಕಾರ್ಮಿಕರಿಗೆ ಸನ್ಮಾನ ಮಾಡುವುದರ ಮುಖಾಂತರ ಆಚರಿಸಲಾಯಿತು. ಈ ಸಂದರ್ಭದಲ್ಲಿ ವಾರ್ಡ್‌ನ ಸದಸ್ಯೆ ಸವಿತಾ ಹುಲ್ಮನಿ ಗಣೇಶ್, ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್, ಪಾಲಿಕೆ ಸದಸ್ಯ ಮಂಜುನಾಥ್ ಗಡಿಗುಡಾಳ್, ಕಾಂಗ್ರೆಸ್ ಮುಖಂಡ ಗಣೇಶ್, ಹೆಲ್ತ್ ಇನ್ಸ್‌ಪೆಕ್ಟರ್‌ಗಳಾದ ನೀಲಪ್ಪ, ಶಶಿಧರ್ ಇನ್ನೂ ಮುಂತಾದವರು ಹಾಜರಿದ್ದರು.

## ಕೊರೊನಾ : 8,873 ಕೋಟಿ ಬಿಡುಗಡೆ

ನವದೆಹಲಿ, ಮೇ 1 – ಕೊರೊನಾ ತಡೆಗಾಗಿ ಆಸ್ಪತ್ರೆಗಳ ನಿರ್ಮಾಣ ಹಾಗೂ ಆಕ್ಸಿಜನ್ ಉತ್ಪಾದನೆ ಸೇರಿದಂತೆ ಹಲವಾರು ಕ್ರಮಗಳಿಗಾಗಿ ಕೇಂದ್ರ ಸರ್ಕಾರ ರಾಜ್ಯ ವಿಕೋಪ ಸ್ಪಂದನಾ ನಿಧಿಯ 8,873.6 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ.

ಕೇಂದ್ರ ಗೃಹ ಸಚಿವಾಲಯದ ಶಿಫಾರಸ್ಸಿನ ಮೇಲೆ ಎಸ್.ಡಿ.ಆರ್. ಎಫ್. ನಿಧಿಯ ಮೊದಲ ಕಂತನ್ನು ಸಾಮಾನ್ಯ ಅವಧಿಗಿಂತ ಮೊದಲೇ ಬಿಡುಗಡೆ ಮಾಡಲಾಗಿದೆ.

ಸಾಮಾನ್ಯವಾಗಿ ಎಸ್.ಡಿ.ಆರ್. ಎಫ್. ನಿಧಿಯ ಮೊದಲ ಕಂತನ್ನು ಜೂನ್ ತಿಂಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ರಾಜ್ಯಗಳು ಕಳೆದ ವರ್ಷ ಬಿಡುಗಡೆ ಮಾಡಿದ ಹಣ ಬಳಕೆಯ ಪ್ರಮಾಣ ಪತ್ರ ನೀಡುವ ಮೊದಲೇ ಈ ಕಂತು ಬಿಡುಗಡೆ ಯಾಗಿದೆ. ಬಿಡುಗಡೆ ಮಾಡಲಾದ ಹಣದ ಅರ್ಧದಷ್ಟನ್ನು ಕೊರೊನಾ ನಿಯಂತ್ರಣ ಕ್ರಮಗಳಿಗೆ ಬಳಸಬಹುದು ಎಂದು ಕೇಂದ್ರ ಗೃಹ ಸಚಿವಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ.

**ರಂಜಾನ್ ರೋಜಾ ಸಮಯ**

**ದಿನಾಂಕ : 02.05.2021**
**ಇಫ್ತೇಯಾರಿ ಸಮಯ : 6-49**
**ದಿನಾಂಕ 03.05.2021**
**ಸಹೇರಿ ಸಮಯ : 4-47**

## ಟ್ರ್ಯಾಕ್ಟರ್ ನಲ್ಲಿದ್ದ ದೋಷ ಪ್ರಶ್ನಿಸಿದ್ದಕ್ಕೆ ಸುಳ್ಳು ದೂರು : ರೈತನ ಆರೋಪ

ದಾವಣಗೆರೆ, ಮೇ 1- ಖರೀದಿಸಿದ್ದ ಟ್ರ್ಯಾಕ್ಟರ್ ನಲ್ಲಿ ದೋಷವಿದ್ದ ಬಗ್ಗೆ ಪ್ರಶ್ನಿಸಿ, ಸರಿಪಡಿಸಿಕೊಡುವಂತೆ ಕೇಳಿದ ನನ್ನ ವಿರುದ್ಧವೇ ಟ್ರ್ಯಾಕ್ಟರ್ ಕಂಪನಿಯೊಂದು ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರು ದಾಖಲಿಸಿದೆ ಎಂದು ಚನ್ನಗಿರಿ ತಾಲ್ಲೂಕು ಕಾರಿಗನೂರು ಗ್ರಾಮದ ರೈತ ಪಿ.ಎಂ. ಮುರುಗೇಶ್ ಆರೋಪಿಸಿದ್ದಾರೆ.

ನಗರದ ಓಂಕಾರ್ ಮೋಟಾರ್ಸ್‌ನಲ್ಲಿ ಜನವರಿ 1ರಂದು ಸೋಲೀಸ್ ಟ್ರ್ಯಾಕ್ಟರ್ ಖರೀದಿಸಿದ್ದ ವೇಳೆ ಟ್ರ್ಯಾಕ್ಟರ್ ಗುಣಮಟ್ಟ ಸರಿಯಿದೆ ಎಂದು ನೀಡಿದ್ದರು. ಆದರೆ, ಅದನ್ನು ನಾವು ತೆಗೆದುಕೊಂಡು ಹೋಗಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿದ ಸಂದರ್ಭದಲ್ಲಿ ಅತ್ಯಧಿಕ ಇಂಧನ ಉರಿಯುವುದು, ಕಾರ್ಯ ಚಟುವಟಿಕೆಯಲ್ಲಿ ವಿಳಂಬ ಸೇರಿದಂತೆ ಇತರೆ ದೋಷ ಕಂಡು ಬಂತು ಎಂದು ಸುದ್ದಿಗೋಷ್ಠಿಯಲ್ಲಿ ದೂರಿದ್ದಾರೆ.

ಕೂಡಲೇ ಶೋ ರೂಂಗೆ ಟ್ರ್ಯಾಕ್ಟರ್ ತಂದು ಅದರಲ್ಲಿರುವ ದೋಷದ ಬಗ್ಗೆ ಮಾಹಿತಿ ನೀಡಿ, ಸರಿಪಡಿಸಿಕೊಡುವಂತೆ ಕೇಳಿದಾಗ, ತಾತ್ಕಾಲಿಕವಾಗಿ ದುರಸ್ತಿ ಮಾಡಿಸಿದ್ದರು. ಆ ಬಳಿಕವೂ ಹಲವು ದೋಷ ಕಂಡು ಬಂದ ಹಿನ್ನೆಲೆಯಲ್ಲಿ ಸರಿಪಡಿಸುವಂತೆ ಕೇಳಿಕೊಂಡರೂ ಅದನ್ನು ಸರಿಪಡಿಸದ ಮಾರಾಟಗಾರರು, ವಿದ್ಯಾನಗರ ಠಾಣೆಯಲ್ಲಿ ಶೋ ರೂಂನ ಪೀಠೋಪಕರಣ ಧ್ವಂಸ ಸೇರಿದಂತೆ ನನ್ನ ವಿರುದ್ಧವೇ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಮಧ್ಯ ಪ್ರವೇಶಿಸಿ ನ್ಯಾಯ ಕೊಡಿಸಬೇಕೆಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ರೈತರಾದ ಕಲ್ಲೇಶ್, ಕೆ. ಎಂ. ರಮೇಶ್, ಪಿ.ಇ. ಚಂದ್ರಶೇಖರ್ ಇದ್ದರು.

## ಹಾವೇರಿ ಜಿಲ್ಲೆ ಮೀಸಲಾತಿ ಪ್ರಕಟ

ರಾಣೇಬೆನ್ನೂರು, ಮೇ 1- ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಅಧಿನಿಯಮದ ಅನುಸಾರ ಹಾವೇರಿ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಸ್ಥಾನಗಳ ಮೀಸಲಾತಿ ಪ್ರಕಟಿಸಿದೆ.

ಜಿಲ್ಲೆಯ 8 ತಾಲ್ಲೂಕುಗಳ ಒಟ್ಟು 38 ಸ್ಥಾನಗಳಲ್ಲಿ 6 ಪರಿಶಿಷ್ಟ ಜಾತಿ, 4 ಪರಿಶಿಷ್ಟ ಪಂಗಡ, 7 ಹಿಂದುಳಿದ ಅ ವರ್ಗ, 2 ಹಿಂದುಳಿದ ಬ ವರ್ಗ, 19 ಸಾಮಾನ್ಯ, 19 ಸ್ಥಾನಗಳು ಶೇ. 50 ಮಹಿಳೆಯರಿಗೆ ಮೀಸಲಿರಿಸಲಾಗಿದೆ.

ಜಿಲ್ಲೆಯ 8 ತಾ.ಪಂ. ಗಳ ಒಟ್ಟು104 ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ 16, ಪರಿಶಿಷ್ಟ ಪಂಗಡ 11, ಹಿಂದುಳಿದ ಅ ವರ್ಗ18, ಹಿಂದುಳಿದ ಬ ವರ್ಗ 4, ಸಾಮಾನ್ಯ 55, ಶೇ. 50 ಮಹಿಳೆಯರಿಗೆ ಮೀಸಲಿರಿಸಲಾಗಿದೆ. ರಾಣೇಬೆನ್ನೂರು ತಾಲ್ಲೂಕಿನ ಒಟ್ಟು 19 ಸ್ಥಾನಗಳಲ್ಲಿ 3 ಪರಿಶಿಷ್ಟ ಜಾತಿ, 2 ಪರಿಶಿಷ್ಟ ಪಂಗಡ, 3 ಹಿಂದುಳಿದ ಅ ವರ್ಗ, 1 ಹಿಂದುಳಿದ ಬ ವರ್ಗ, 10 ಸಾಮಾನ್ಯ, ಮಹಿಳೆಯರಿಗೆ 10 ಸ್ಥಾನಗಳನ್ನು ಮೀಸಲಿರಿಸಲಾಗಿದೆ.

## ಬಂಟರ ಸಂಘದಿಂದ ಮಾಸ್ಕ್ ವಿತರಣೆ



ದಾವಣಗೆರೆ, ಮೇ 1- ದಾವಣಗೆರೆ-ಚಿತ್ರದುರ್ಗ ಬಂಟರ ಸಂಘದ ವತಿಯಿಂದ ಕೊರೊನಾ ಕುರಿತು ಜಾಗೃತಿ ಮೂಡಿಸುವ ಜೊತೆಗೆ ಎನ್-95ನ ಒಂದು ಸಾವಿರ ಮಾಸ್ಕ್ ಗಳನ್ನು ವಿತರಿಸಲಾಯಿತು.

ಕರಾವಳಿ ಕ್ರೆಡಿಟ್ ಕೋ ಆಪ್ ಸೊಸೈಟಿಯ ಅಧ್ಯಕ್ಷ ಉಮೇಶ್ ಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ ಶೆಟ್ಟಿ, ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಸಿತಾರ ಪ್ರಭಾಕರ್ ಶೆಟ್ಟಿ, ವೈಶಾಲಿ ಮಹೇಶ್ ಶೆಟ್ಟಿ, ಕಿರಣಕುಮಾರ್, ಸದಾಶಿವ ಶೆಟ್ಟಿ, ಬೇಲೂರು ಸಂತೋಷ ಕುಮಾರ್ ಶೆಟ್ಟಿ, ಅಜ್ಜಪ್ಪ ಪವಾರ್, ಅಂತುಗೋಪಿ ಉಪಸ್ಥಿತರಿದ್ದರು.

## ವೃದ್ಧಾಶ್ರಮಗಳಿಗೆ ಕೊರೊನಾ ಪೆಟ್ಟು...

**(1ನೇ ಪುಟದಿಂದ)** ವೃದ್ಧಾಶ್ರಮದಲ್ಲಿ ನೌಕರರೂ ಕಡಿಮೆಯಾಗಿದ್ದಾರೆ. ವೃದ್ಧರ ಆರೋಗ್ಯ ಕಾಪಾಡುವ ಹೊಣೆಗಾರಿಕೆ ಭಾರೀ ಕಷ್ಟಕರವಾಗಿ ಪರಿಣಮಿಸಿದೆ. ವೃದ್ಧಾಶ್ರಮ ಗಳಲ್ಲಿ ಸ್ವಚ್ಛತೆ ಕಾಪಾಡುವುದು, ಅಡುಗೆ, ಅಗತ್ಯ ವಸ್ತುಗಳ ಸರಬರಾಜು ಸೇರಿದಂತೆ ಹಲವು ಸಮಸ್ಯೆಗಳು ಈ ಹಿಂದೆ ಲಾಕ್‌ಡೌನ್ ಸಮಯದಲ್ಲೂ ಉದ್ಭವಿಸಿದ್ದವು. ಇದೀಗ ಮತ್ತೆ ಮರುಕಳಿಸತೊಡಗಿವೆ.

ಕರ್ಫ್ಯೂ ಹಿನ್ನೆಲೆಯಲ್ಲಿ ವೃದ್ಧಾಶ್ರಮಗಳ ನಿರ್ವಹಣಾ ವೆಚ್ಚ ಕೂಡಾ ಗಗನಕ್ಕೇರಿದೆ. ಸರಬರಾಜುದಾರರು ಬೆಲೆ ಏರಿಕೆ ಮಾಡಿದ್ದಾರೆ. ಅಕ್ಕಿ, ಸಕ್ಕರೆ, ತರಕಾರಿ ಹೀಗೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ವೃದ್ಧಾಶ್ರಮಕ್ಕೆ ಬಂದು ತಮ್ಮ ಹುಟ್ಟುಹಬ್ಬ ಸೇರಿದಂತೆ ಹಲವು ವಾರ್ಷಿಕೋತ್ಸವ ಆಚರಿಸಿಕೊಳ್ಳುವವರೇ ಹೆಚ್ಚು. ಇದೀಗ ಅವರೂ ಇಲ್ಲವಾಗಿದ್ದಾರೆ.

ಸರ್ಕಾರದ ಅನುದಾನದ ಪಡೆಯುವುದು ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ವೃದ್ಧಾಶ್ರಮಗಳು ಮಾತ್ರ. ಆದರೆ ಹೆಚ್ಚಿನ ಆಶ್ರಮಗಳು ಸಂಘ-ಸಂಸ್ಥೆಗಳು ಹಾಗೂ ದಾನಿಗಳ ದೇಣಿಯಿಂದಲೇ ನಡೆಯುತ್ತದೆ. ಇದೀಗ ಅತಿಥಿಗಳು, ದೇಣಿಗೆ ನೀಡುವವರು ಕಡಿಮೆ ಆಗಿರುವ ಕಾರಣ, ವೃದ್ಧಾಶ್ರಮಗಳೂ ಆರ್ಥಿಕ ಕುಸಿತಕ್ಕೆ ಸಿಲುಕಿವೆ.

ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಅನುದಾನ ಪಡೆಯುವ ವೃದ್ಧಾಶ್ರಮಗಳಾದ ದೊಡ್ಡಬಾತಿಯ ಮೈತ್ರಿ ಅಸೋಸಿಯೇಷನ್ಸ್, ಮಾಯಕೊಂಡದ ವಿವೇಕಾನಂದ ವೃದ್ಧಾಶ್ರಮ, ಗುತ್ತೂರು ಕಾಲೋನಿಯ ವೃದ್ಧಾಶ್ರಮ, ಹಾಗೂ ದಾವಣಗೆರೆಯಲ್ಲಿನ ಒಂದು ವೃದ್ಧಾಶ್ರಮದಲ್ಲಿ ಪ್ರಸ್ತುತ 74 ವೃದ್ಧರು, 69 ವೃದ್ದೆಯರು ಸೇರಿ 143 ಜನರಿದ್ದು, ಈ ಪೈಕಿ 64 ಜನರಿಗೆ ಮಾತ್ರ ಲಸಿಕೆ ನೀಡಲಾಗಿದೆ.

## ಕೋವಿಶೀಲ್ಡ್ ಉತ್ಪಾದಕನಿಗೆ 'ಬೆದರಿಕೆ'

**(1ನೇ ಪುಟದಿಂದ)** ಏಕೆ ಅಗತ್ಯ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳುತ್ತಿಲ್ಲ ಎಂದೂ ಉದ್ಯಮಿ ತಿಳಿಸಿದ್ದಾರೆ.

ಮುಖ್ಯಮಂತ್ರಿಗಳು, ಪ್ರಮುಖ ಉದ್ಯಮಿಗಳೂ ಸೇರಿದಂತೆ ಹಲವರು ತಮಗೆ ದೂರವಾಣಿ ಕರೆ ಮಾಡಿ ಲಸಿಕೆಗಾಗಿ ಒತ್ತಡ ಹೇರುತ್ತಿದ್ದರು ಎಂದಿರುವ ಪೂನಾವಾಲಾ, ಇವರ ವರ್ತನೆ ಬೆದರಿಕೆಗೂ ಮೀರಿದ್ದಾಗಿತ್ತು ಎಂದಿದ್ದಾರೆ.

ನೀವು ನನಗೆ ಲಸಿಕೆ ಪೂರೈಸದೇ ಹೋದರೆ ಒಳ್ಳೆಯದಾಗುವುದಿಲ್ಲ ಎಂದು ಅವರು ಹೇಳುತ್ತಿದ್ದರು. ಅವರ ಮಾತಿನ ಧಾಟಿ ಕೆಡುಕಾಗಿರುತ್ತಿತ್ತು. ನಾನು ಹೇಳಿದಂತೆ ಕೇಳದೇ ಹೋದರೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದವರು ಇಂಗಿತ ವ್ಯಕ್ತಪಡಿಸುತ್ತಿದ್ದರು. ನಾನು ಅಂತಹ ಪರಿಸ್ಥಿತಿಗೆ ವಾಪಸ್ಸಾಗಲು ಬಯಸು ವುದಿಲ್ಲ. ಹೀಗಾಗಿ ದೀರ್ಘ ಕಾಲದವರೆಗೆ ಲಂಡನ್ ನಲ್ಲಿ ಉಳಿದುಕೊಂಡಿದ್ದೇನೆ ಎಂದಿರುವ ಅವರು, ಔದ್ಯಮಿಕ ಕಾರಣಗಳಿಂದಲೂ ಲಂಡನ್‌ಗೆ ಬಂದಿರುವುದಾಗಿ ಹೇಳಿದ್ದಾರೆ.

ಭಾರತದ ಹೊರಗೆ ಬ್ರಿಟನ್ ರೀತಿಯ ದೇಶಗಳಲ್ಲಿ ಲಸಿಕೆ ಉತ್ಪಾದನೆ ಯೋಜನೆ ಇದೆ. ಮುಂದಿನ ಕೆಲ ವಾರಗಳಲ್ಲಿ ಈ ಬಗ್ಗೆ ಘೋಷಣೆ ಮಾಡುತ್ತೇನೆ ಎಂದವರು ತಿಳಿಸಿದ್ದಾರೆ.

## 1.41 ಲಕ್ಷ ಕೋಟಿ ರೂ. ಜಿಎಸ್‌ಟಿ ಸಂಗ್ರಹ

ನವದೆಹಲಿ, ಮೇ 1 – ಏಪ್ರಿಲ್ ತಿಂಗಳಲ್ಲಿ ಜಿ.ಎಸ್.ಟಿ. ಸಂಗ್ರಹ ದಾಖಲೆಯ 1.41 ಲಕ್ಷ ಕೋಟಿ ರೂ.ಗಳ ಹಂತಕ್ಕೆ ತಲುಪಿದೆ. ಮಾರ್ಚ್ ತಿಂಗಳಲ್ಲಿ 1.23 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿತ್ತು. ಅದಕ್ಕೆ ಹೋಲಿಸಿದರೆ ಏಪ್ರಿಲ್‌ನಲ್ಲಿ ಶೇ.14ರ ಏರಿಕೆಯಾಗಿದೆ.

ಈ ತಿಂಗಳಲ್ಲಿ ಆಮದು ಸೇವೆಗಳೂ ಸೇರಿದಂತೆ ದೇಶೀಯ ವಹಿವಾಟಿನಲ್ಲಿ ಕಳೆದ ತಿಂಗಳಿಗಿಂತ ಶೇ.21ರಷ್ಟು ಹೆಚ್ಚು ತೆರಿಗೆ ಸಂಗ್ರಹವಾಗಿದೆ. ಕಳೆದ ಏಳು ತಿಂಗಳಿನಿಂದ ಜಿ.ಎಸ್.ಟಿ. ಸಂಗ್ರಹ ಸತತವಾಗಿ ಏರು ಮುಖವಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ. ಇದರಲ್ಲಿ ಸಿ.ಜಿ.ಎಸ್. ಟಿ. ಪ್ರಮಾಣ 27,837 ಕೋಟಿ ರೂ., ಎಸ್. ಜಿ.ಎಸ್.ಟಿ. 35,621 ಕೋಟಿ ರೂ., ಐ.ಜಿ. ಎಸ್.ಟಿ. 68,481 ಕೋಟಿ ರೂ. ಹಾಗೂ ಸೆಸ್ 9,445 ಕೋಟಿ ರೂ. ಆಗಿದೆ.

## 'ಹಾಸ್ಯ ಸಾರ್ಥಕ್ಯ'

**(ಇಂದು 'ವಿಶ್ವ ಹಾಸ್ಯ ದಿನ')**

ಹಾಸ್ಯದೊಳು ಬೇಕು ಮನನೋಯಿಸದ
ಸದಭಿರುಚಿ
ನೊಂದವರ ಮುದಗೊಳಿಸಿ ನಗುವಾ ಮೃತ ವೆರಚಿ,
ಹಾಸ್ಯವೆನಲದುವೆ ಪರಟೀಕೆ ಸರಿಯಲ್ಲ
ನಿತ್ಯ ಬದುಕಿನೆಲ್ಲೆಡೆಯು ಹಾಸ್ಯವಿದೆಯಲ್ಲ.

ನಗಿಸಿದರೆ ಸಾಕದುವೆ ಹಾಸ್ಯದಾ ಸಾರ್ಥಕ್ಯ
ಎಂದು ಭಾವಿಸಬೇಡಿ ಇದು ಅರ್ಧಸತ್ಯ,
ನಗುವೊಂದಿಗದು ಜಗಕೆಕೊಡಬೇಕು ನೀತಿ
ಬೆಳೆಸುವಂತಿರಬೇಕು ಸಮಾಜ ಪ್ರೀತಿ

**- ಹೆಚ್.ಬಿ.ಮಂಜುನಾಥ್**, ಹಿರಿಯ ಪತ್ರಕರ್ತ.

## ಕೂಡ್ಲಿಗಿ : ಸಚಿವ ಉಮೇಶ್ ಕತ್ತಿ ವಜಾಗೆ ಆಗ್ರಹ

ಕೂಡ್ಲಿಗಿ, ಮೇ 1- ರೈತನಿಗೆ ಸಾಯಿ ಹೋಗು ಎಂದು ಹೇಳಿರುವ ಆಹಾರ ಪೂರೈಕೆ ಸಚಿವ ಉಮೇಶ್ ಕತ್ತಿ ಅವರನ್ನು ಕೂಡಲೇ ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ, ಕೂಡ್ಲಿಗಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಂ. ಗುರುಸಿದ್ಧನಗೌಡ, ಕಾರ್ಯದರ್ಶಿ ಟಿ. ಉಮೇಶ್, ಎಸ್ಸಿ ಸೆಲ್ ಜಿಲ್ಲಾಧ್ಯಕ್ಷ ಕಾವಲಿ ಶಿವಪ್ಪ ನಾಯಕ, ಬ್ಲಾಕ್ ಕಾಂಗ್ರೆಸ್ ವಕ್ತಾರ ಮಹ್ಮದ್ ಜಿಲಾನ್, ಪ.ಪಂ ಸದಸ್ಯರಾದ ಶುಕೂರ್, ರಾಘವೇಂದ್ರ ಮತ್ತು ನಿತೀಶ್, ಹನುಮಂತ ಉಪಸ್ಥಿತರಿದ್ದರು.

## ವಾರ್ಡ್‌ಗಳ ಅಭಿವೃದ್ಧಿಗೆ ಒತ್ತು

**(1ನೇ ಪುಟದಿಂದ)** ಮೋಹನ್ ದುರಗೋಜಿ, ಮೆಹಬೂಬ್ ಬಾಷಾ, ದಾದಾ ಖಲಂದರ್, ಮುಖಂಡರಾದ ಸುರೇಶ್ ಚಂದಾಪೂರ್, ಅಮರಾವತಿ ನಾಗರಾಜ್, ಹೆಚ್. ನಿಜಗುಣ, ರಾಜು, ಸಂಗಮೇಶ್, ಆಶೋಕ, ಡಿ. ಸಿದ್ದೇಶ್, ಭಾನುವಳ್ಳಿ ದಾದಾಪೀರ್, ಜಾಕೀರ್ ಇನ್ನಿತರರಿದ್ದರು.

## ತಲುಪಿದ ಸ್ಪುಟ್ನಿಕ್ ಲಸಿಕೆ

**(1ನೇ ಪುಟದಿಂದ)** ಅನುಗುಣವಾಗಿದೆ ಎಂದು ಕಂಪನಿ ಅಧಿಕಾರಿಗಳು ತಿಳಿಸಿದ್ದಾರೆ.

ಭಾರತದಲ್ಲಿ 1.25 ಕೋಟಿ ಲಸಿಕೆ ಪೂರೈಸಲು ರಷ್ಯಾದ ಆರ್.ಡಿ.ಐ.ಎಫ್. ಕಂಪನಿ ಜೊತೆಗೆ ಡಾ. ರೆಡ್ಡೀಸ್ ಒಪ್ಪಂದ ಮಾಡಿಕೊಂಡಿದೆ. ಈ ಲಸಿಕೆಗಳನ್ನು 2 ಡೋಸ್‌ನಲ್ಲಿ 21 ದಿನಗಳ ಅಂತರದಲ್ಲಿ ನೀಡಬೇಕಿದೆ.


**ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) Civil ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:

**ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್** VCS

ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399


## ಪಾಲಿಕೆಯ ತೆರಿಗೆಗೊಂದು ತೆರಿಗೆ

**ಓದುಗರ ಪತ್ರ**

**ಮಾನ್ಯರೇ,**

ದಾವಣಗೆರೆ ಮಹಾನಗರ ಪಾಲಿಕೆಯು ಆಸ್ತಿ, ನೀರಿನ ಕಂದಾಯ ಗಳನ್ನು ಕಟ್ಟಿಸಿಕೊಳ್ಳುವ ವ್ಯವಸ್ಥೆಯನ್ನು ಮಾಡಿದೆ. ಆದರೆ ಇದಕ್ಕೆ ಕ್ಯೂ ನಿಲ್ಲಲು ನಿವಾಸಿಗಳು ಗಟ್ಟಿ ಇರಬೇಕಾದ ಅನಿವಾರ್ಯತೆ ಇದೆ.

ಅರ್ಜಿ ಪಡೆಯಲು ಸರದಿ ನಿಲ್ಲಬೇಕು. ಗಂಟೆಗಳ ನಂತರ ಅರ್ಜಿ ಸಿಗುತ್ತದೆ. ಚಲನ್ ಪಡೆದು ಕಟ್ಟಲು ಹಣದೊಂದಿಗೆ ಬ್ಯಾಂಕಿನಲ್ಲಿ ಸರದಿ ನಿಲ್ಲಬೇಕು. ಆ ಚಲನ್ ಮೂರು ಪ್ರತಿಗಳನ್ನು ಹೊಂದಿದೆ. ಎರಡನ್ನು ಬ್ಯಾಂಕಿನವರು ಇಟ್ಟುಕೊಂಡು ಒಂದನ್ನು ಗ್ರಾಹಕರಿಗೆ ಕೊಡುತ್ತಾರೆ. ಆ ಒಂದು ಪ್ರತಿಯನ್ನು ಜೆರಾಕ್ಸ್ ಮಾಡಿಸಿಕೊಂಡು ಮತ್ತೆ ಸರದಿಯಲ್ಲಿ ನಿಂತು ಪ್ರತಿಯನ್ನು ಕೊಟ್ಟು ಸ್ವೀಕೃತಿ ಪಡೆಯಬೇಕು. ಇಷ್ಟು ಸರದಿ ನಿಂತಿದ್ದಲ್ಲದೆ, ಜೆರಾಕ್ಸ್‌ಗೆ ನಿವಾಸಿಗಳು ದುಪ್ಪಟ್ಟು ಹಣ ತೀಕಬೇಕು, ಇದೇಕೆ ಎಂದು ಅರ್ಥವಾಗುವುದಿಲ್ಲ. ಚಲನ್‌ನ ಪ್ರತಿಯೇ ನಾಲ್ಕು ಇರುವ ಹಾಗೆ ಏಕೆ ಮಾಡಬಾರದು? ಅಥವಾ ಬ್ಯಾಂಕಿನವರಿಗೇಕೆ ಎರಡು ಪ್ರತಿ ಒಂದನ್ನು ಪುನಃ ಪಾಲಿಕೆಗೆ ಕೊಡುತ್ತಾರಲ್ಲವೇ? ನಿವಾಸಿಗಳಿಗೇಕೆ ಈ ಹೊರೆ. 'ಪೇಪರ್ ಲೆಸ್'ನ ಈ ಕಾಲದಲ್ಲಿ ಏಕಿಷ್ಟು ಹಣ ಮತ್ತು ಹಾಳೆ ಹಾಳು ಮಾಡುತ್ತಿದ್ದಾರೆಯೋ ಗೊತ್ತಿಲ್ಲ?

ತೆರಿಗೆಗೊಂದು ತೆರಿಗೆ ಬೇಕೆ? ಮೊದಲೇ ಹೆಚ್ಚಿನ ತೆರಿಗೆಗಳಿಂದ ನಿವಾಸಿಗಳು ನಲುಗಿ ಹೋಗಿದ್ದಾರೆ. ಸಾಲದ್ದಕ್ಕೆ ತೆರಿಗೆ ಕಟ್ಟಲು ಒಬ್ಬರು ಒಂದು ದಿನ ಪೂರ್ತಿ ಕಳೆಯಬೇಕಾದ ಅತೀ ಸುಲಭದ ವ್ಯವಸ್ಥೆ ಬೇರೆ ಮಾಡಿದ್ದಾರೆ.

ಅಶಕ್ತರೂ ದಾವಣಗೆರೆಯಲ್ಲಿ ಇದ್ದಾರೆ. ಬಡವರೂ ಇದ್ದಾರೆ ಎಂಬುದನ್ನು ಗಮನದಲ್ಲಿಟ್ಟಕೊಂಡು, ಸುಲಭಗೊಳಿಸಿ ಜೆರಾಕ್ಸ್ ತೆರಿಗೆಯನ್ನು ತಪ್ಪಿಸಿ. ವಿಶೇಷ ಎಂದರೆ ಈ ಸಾಲಿನ ಕಂದಾಯಗಳನ್ನು ಇನ್ನೂ ಕಟ್ಟಿಸಿಕೊಳ್ಳುತ್ತಿಲ್ಲ. ಬಿಸಿಲಲ್ಲಿ ಪ್ರಾಮಾಣಿಕ ತೆರಿಗೆದಾರರು ಪಾಲಿಕೆಗೆ ಅಲೆದು ಅಲೆದು ಬಿಸಿಲ ಹಣ್ಣನ್ನು ತಿಂದು ಹೈರಾಣಾಗುತ್ತಿದ್ದಾರೆ. ಇದೇಕೆ ಇಂತಹ ಶಿಕ್ಷೆ, ದಯವಿಟ್ಟು ಪರಿಶೀಲಿಸಿ, ಸರಿಪಡಿಸಿ. ಶೋಷಣೆ ಮಾಡಬೇಡಿ.....

- ಎಸ್.ಜಿ. ದಾಸ್, ದಾವಣಗೆರೆ.


**ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.**

ಆಡಳಿತ ಕಛೇರಿ ಮತ್ತು ಪ್ರಧಾನ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-577 001.

ಫೋನ್ ನಂ. : 08192-256107, ಮೊ ನಂ. : 94498 19522, 99644 34634.

**ಗ್ರಾಹಕರ ಗಮನಕ್ಕೆ**

**ಬ್ಯಾಂಕಿನ ವ್ಯವಹಾರದ ವೇಳೆ ಬದಲಾವಣೆ**

ಕೋವಿಡ್-19 ಪ್ರಯುಕ್ತ ಬ್ಯಾಂಕಿನ ಗ್ರಾಹಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಬ್ಯಾಂಕಿನ ವೇಳೆಯನ್ನು ದಿನಾಂಕ 03.05.2021ರಿಂದ ಮುಂದಿನ ಆದೇಶದವರೆಗೆ **ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ** ವ್ಯವಹಾರ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಗ್ರಾಹಕರು ಇದರ ಸದುಪಯೋಗಪಡಿಸಿಕೊಳ್ಳಲು ವಿನಂತಿಸಲಾಗಿದೆ.

ಅಲ್ಲದೇ, ಬ್ಯಾಂಕಿನ ಬೈಲಾ ನಂ. 20(1) ರನ್ವಯ ಸದಸ್ಯರು ಕನಿಷ್ಟ ಷೇರು ಬಂಡವಾಳ ರೂ. 2000/-ಗಳನ್ನು ಹೊಂದಿರತಕ್ಕದ್ದು. ಇಲ್ಲವಾದಲ್ಲಿ ಸದಸ್ಯನಾಗಿ ಮುಂದುವರೆಯಲು ಅವಕಾಶವಿರುವುದಿಲ್ಲ, ಆದ್ದರಿಂದ ರೂ. 2,000/- ಷೇರು ಮೌಲ್ಯಕ್ಕಿಂತ ಕಡಿಮೆ ಷೇರು ಹೊಂದಿರುವವರು ಈ ಸೂಚನೆ ಪ್ರಕಟಣೆಯಾದ 15 ದಿವಸಗಳೊಳಗಾಗಿ ಪ್ರಧಾನ ಕಚೇರಿ ಶಾಖೆಯಲ್ಲಿ ತಮ್ಮ ಷೇರು ಹಣವನ್ನು ರೂ. 2000/- ಗಳಿಗೆ ಹೆಚ್ಚಿಸಿಕೊಳ್ಳಲು ವಿನಂತಿಸಲಾಗಿದೆ. ತಪ್ಪಿದ್ದಲ್ಲಿ ಸಹಕಾರ ಸಂಘಗಳ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಈ ವಿಷಯವನ್ನು ಈಗಾಗಲೇ ದಿನಾಂಕ 06.03.2021ರಂದು ಪ್ರಕಟಿಸಿದ್ದು, ಮತ್ತೊಮ್ಮೆ ಈ ಮೂಲಕ ಸದಸ್ಯರಿಗೆ ತಿಳಿಸಲಾಗಿದೆ.

ಸಹಿ/- ಪ್ರಧಾನ ವ್ಯವಸ್ಥಾಪಕರು




## ಅತೀ ಅಮೃತವೂ Poisonನ್ನೇ...!



ಅಂಕಲ್ ಈಗ ಪರಿಸ್ಥಿತಿ ಹೇಗಿದೆ ಅಂದರೇ ಏನು ಮಾಡಬೇಕೂ ಅನ್ನೋದೇ ತೋಚ್ತಾ ಇಲ್ಲ?

**ಹೌದು ತಮ್ಮಾ, ಅದಕ್ಕೇ ಕೆಲವರು ತೋಚಿದ್ದು ಮಾಡ್ತಾ ಇದಾರೆ. ಕೆಲವು ಸರಿ ಆಗಿದ್ದರೆ ಕೆಲವು ಎಡವಟ್ಟು ಆಗ್ತಾ ಇವೆ. ಏನೇ ಸಲಹೆ ನೀಡಿದ್ರೂ ಕೆಲವರು ತಪ್ಪಾಗಿ ಅರ್ಥ ಮಾಡ್ಕೊಳ್ತಾರೆ. ಕೆಲವರು ಅತಿ ಮಾಡ್ತಾರೆ. ಅದಕ್ಕೇ ಮುಚ್ಕೆಂಡು ಕೂತ್ಗೊಳ್ಳಾಣ ಅಂತ ಡಿಸೈಡು ಮಾಡಿದೀನಿ. ಅತೀ ಅಮೃತವೂ ಪಾಯಿಜನ್ನು ಅನ್ನುವುದು ಎಲ್ಲರಿಗೂ ಗೊತ್ತಿರಬೇಕು.**

ನಿಮಗೆ ಗೊತ್ತಿರುವ ಹಾಗೆ ಏನೇನು ಎಡವಟ್ಟು ಆಗಿದೆ?

**ನೋಡಪಾ ಮಲೆನಾಡಿನ ಗೆಳೆಯನೊಬ್ಬ ಕಾಡಾ ಕಷಾಯ ಗಂಟಲನ್ನು ಬೆಚ್ಚಗಿಡುತ್ತೆ. ಕೊರೊನಾ ಕೊಲ್ಲುತ್ತೆ ಅಂದ. ಅದನ್ನು ಹೇಗೆ ಮಾಡಬೇಕು ಅಂತ ತಿಳಿಸಿದ್ದ. ನಾನು ಈ ವಿಷಯವನ್ನು ಎಲ್ಲರ ಹತ್ತಿರ ಹಂಚಿಕೊಂಡಿದ್ದೆ. ನಮ್ಮ ಬಯಲು ಸೀಮೆ ಬೆಟ್ಟಪ್ಪ ಪ್ರತಿದಿನ ಒಂದು ಎಂಟು ಬಾರಿ ಅದನ್ನು ಮಾಡ್ಕೆಂಡು ಕುಡಿಯತೊಡಗಿದ! ಒಂದು ತಿಂಗಳಿಗೆ ಬಾಡಿ ಹೀಟು ಹೆಚ್ಚಾಗಿ ಕೆಳಗೆ ಪೈಲ್ಸ್ ಮೊಳಕೆ ಒಡಿತು! ಒದ್ದಾಡಿ ಆಸ್ಪತ್ರೆಗೆ ಸೇರಿದ. ಕೆಲವರು ಅಣ್ಣಾ ನೀನು ಸಲಹೆ ಕೊಟ್ಟಿದ್ದಕ್ಕೆ ಹಿಂಗಾಗಿದ್ದು ಅಂದ್ರು!**

ಆಮೇಲೆ?.

**ಈ ಮಲೆನಾಡಿನ ಕಷಾಯ ನಮ್ಮ ಬಯಲು ಸೀಮೆ ಮಂದಿಗೆ ಹೊಂದಿಕೆ ಆಗ್ತತೋ ಇಲ್ವೋ ಅಥವಾ ಅದನ್ನು ನಾವು ತಗೋಬೇಕೂ ಅಂದ್ರೆ ಎಷ್ಟು ಪ್ರಮಾಣದ ಯಾವ ಹೊತ್ತಿಗೆ ತಗೋಬೇಕು ಅನ್ನುವುದರ ಬಗ್ಗೆ ತಿಳಿದುಕೊಂಡು ಪ್ರಯತ್ನ ಮಾಡಬೇಕಿತ್ತು. ಇದೇ ರೀತಿ ನಿಂಬೆ ಹಣ್ಣಿನ ರಸ ಮೂಗಿಗೆ ಬಿಟ್ಕಳ ವಿಷಯ. ನಿನಗೆ ಗೊತ್ತಿರಬೇಕಲ್ಲ.**

ಏನದು?

**ನಾಲ್ಕು ಹನಿ ನಿಂಬೆ ರಸ ಮೂಗಿಗೆ ಬಿಟ್ಕಂಡರೆ ಕಫ ಕಿತ್ಗಂಡು ಬರ್ತತಿ ಅಂತ ಓದಿ, ಅದರಂತೆ ಮಾಡಿದೆ. ಕಫ ಕಿತ್ಗಂಡು ಹೋತು. ಮೂಗು ಹಳಾರ ಆತು. ಈ ವಿಷಯವನ್ನು ಎಲ್ಲರ ಹತ್ರ ಹಂಚ್ಕೆಂಡೆ. ನಮ್ಮ ಮಾದೇವ ದಿನಕ್ಕೆ ಒಂದು ನಾಲ್ಕು ಬಾರಿ ಮೂಗಿಗೆ ಎಂಟೆಂಟು ಹನಿ ಲಿಂಬೆ ರಸ ಬಿಡಕೆಣಕ್ಕೆ ಶುರು ಮಾಡಿದ. ಮೂರು ದಿನಕ್ಕೆ ಅವನ ಮೂಗು ಡೊಣಮೆಣಸಿನ ಕಾಯಿ ತರಾ ಊದ್ಕೆಂಡು ಬಿಟ್ತು! ನೀನು ಕೊಟ್ಟ ಸಲಹೆಯಿಂದ ಹಿಂಗಾತು ಅಂತಾ ಅನೇಕರು ನನಗೆ ಕ್ಲಾಸ್ ತಗೊಂಡ್ರು. ಅಲ್ಲೋ ಮಾರಾಯ ಒಂದು ಸಾರಿ ಕಫ ಕಿತ್ಗಂಡು ಹೋದ ಮೇಲೆ ಮುಗೀತು. ಅದನ್ನು ಹಗಲೆಲ್ಲಾ ಹಿಂಡ್ಕೆಂಡ್ರೇ ಹೆಂಗೆ? ಮೊದಲೇ ಅದು ಸಿಟ್ರಿಕ್ ಆ್ಯಸಿಡ್ಡೂ! ಸೂಕ್ಷ್ಮ ಇರೋ ಮೂಗಿನ ಹೊಳ್ಳೆಗಳು ತಡ್ಕಾಬೇಕಲಾ ಅಂದೆ.**

ಅದಕ್ಕೆ ಏನಂದ್ರು?

**ಇವನ್ನೆಲ್ಲಾ ನೀನು ಮೊದಲೇ ಹೇಳಬೇಕಿತ್ತು ಅಂದ್ರು. ಈ ಎಣ್ಣೆ ಹೊಡೆಯೋ ವಿಷಯಕ್ಕೂ ಹೀಗೆ ಆಗಿತ್ತು.**

ಏನಾಗಿತ್ತು?

**ವಿಸ್ಕಿ ಹೊಡದ್ರೆ ಹೃದಯಕ್ಕೆ ಒಳ್ಳೇದು ಅಂತಾ ಓದಿದ್ದನ್ನು ಗೆಳೆಯರ ಹತ್ರ ಹೇಳ್ಕೆಂಡೆ. ನಮ್ಮ ಬಾಟ್ಲಿ ಬಸ್ಯಾ ಬೆಳಿಗ್ಗೆ ಒಂದು ಕ್ವಾಟ್ರು, ಸಾಯಂಕಾಲ ಎರಡು ಕ್ವಾಟ್ರು ಹೊಡೆಯಕ್ಕೆ ಶುರು ಹಚ್ಗೆಂಡ! ಕೊನೆಗೆ ಕರುಳು ತೂತಾಗಿ ಆಸ್ಪತ್ರೆ ಸೇರ್ಕೆಂಡ! ಎಲ್ರೂ ಎಲ್ಲಾ ನಿನ್ನಿಂದಲೇ ಆಗಿದ್ದು ಅಂದ್ರು. ಹೇ ಒಳ್ಳೆಯ ಸ್ಕಾಚ್ ದಿನಾ ರಾತ್ರಿ, ಒಂದು ಪೆಗ್ ಮಾತ್ರ ಹೊಡದ್ರೆ, ಹಾರ್ಟಿಗೆ ಒಳ್ಳೇದು ಅಂತಾ ಹೇಳಿದ್ರೇ ಇವ್ನು ಹೆಚ್ಚಿಗೆ ಹೊಡದ್ರೆ ಹಾರ್ಟು ಜಾಸ್ತಿ ಚೆನ್ನಾಗಿರ್ತತಿ ಅಂದ್ಕಂಡಿದಾನೆ! ಇದಕ್ಕೆ ನಾನೇನು ಮಾಡಲಿ ಎಂದು ಕೂಗಿ ಕೂಗಿ ಹೇಳಬೇಕಾತು.**

ಹೌದು ಅಂಕಲ್ ಯಾವುದನ್ನೇ ಅತೀ ಮಾಡೋದು ಒಳ್ಳೆಯದಲ್ಲ. ನನ್ನ ಫ್ರೆಂಡ್ ಒಬ್ಬ ಮಾಸ್ಕ್ನ ಇಪ್ಪತ್ನಾಲ್ಕು ತಾಸು ಹಾಕಿಕೊಂಡು ಇರುತ್ತಿದ್ದ. ಮನೆಯಲ್ಲಿ ಒಬ್ಬನೇ ಇದ್ರೂ ಹಾಕಿಕೊಳ್ಳುತ್ತಿದ್ದ. ಈಗ ಸಫೋಕೇಷನ್ ಆಗಿ ಸುಸ್ತಾಗಿದ್ದಾನೆ.

**ಹ್ಞೂಂ ಕಣಪಾ. ನಮ್ಮ ರಾಜಪ್ಪನ ಮಗಳು, ಅಳಿಯಂದು ಇದೇ ರೀತಿ ಕೇಸು...! ತಲಿಕೆಟ್ಟು ರಾಜಪ್ಪ ಈ ಕೊರೊನಾ ನಾಶ ಆಗೋ ತನಕ ನಾನು ಅಜ್ಜ ಆಗೋಲ್ಲ. ಮೊಮ್ಮಕ್ಕಳನ್ನು ಕಾಣೋದಿಲ್ಲ ಅಂತಾ ಹೇಳ್ತಾ ಇದಾನೆ.**

ಯಾಕೆ?

**ಅವರ ಮದುವೆ ಮಾಡಿ ಒಂದು ವರ್ಷ ಆದರೂ ಅವರಿಬ್ಬರೂ ಜೊತೆಯಾಗಿ ಮಲಗೋ ವಿಷಯ ಬಿಡು, ಓಡಾಡ್ತಾನೇ ಇಲ್ವಂತೆ!**

ಕಾರಣ!?

**ಕೊರೊನಾ!**

ಹ್ಞಾಂ!?

**ದೈಹಿಕ ಅಂತರ ಕಾಪಾಡಿಕೊಂಡು ಇದಾರಂತೆ....!**

## ಪ್ರತಿಯೊಬ್ಬ ನಾಗರಿಕನೂ ಕೂಡ...

ಎರಡನೆ ಅಲೆಯಾಗಿ ಮತ್ತೆ ಮರುಕಳಿಸಿರುವ ಮಹಾಮಾರಿ ಕೊರೊನಾ ಅಟ್ಟಹಾಸಕ್ಕೆ ಗಂಟೆಗೆ ನಾಲ್ಕರಿಂದ ಐದು ಜೀವಗಳು ದೇಹದಿಂದ ಬೇರ್ಪಡುತ್ತಿವೆ. ಹೀಗಿದ್ದರೂ ಕೂಡ ನಮ್ಮ ಜನತೆ ಒಂದಿಷ್ಟು ಭಯವಿಲ್ಲದೆ , ಬೇಜವಾಬ್ದಾರಿಯಿಂದ ವರ್ತಿಸುತ್ತಿರುವುದು ನಿಜಕ್ಕೂ ವಿಷಾದದ ಸಂಗತಿ. ನಮ್ಮ ಪ್ರತಿ ಸಂಕಷ್ಟಕ್ಕೂ ಜಿಲ್ಲಾಡಳಿತವೇ ಮುಂಜಾಗ್ರತೆ ವಹಿಸಬೇಕೇ? ಪೊಲೀಸರೇ ಲಾಠಿ ಹಿಡಿದು ಧಾವಿಸಬೇಕೇ? ನಮ್ಮ ರಕ್ಷಣೆ ಮತ್ತು ನಮ್ಮ ಸಮಾಜದ ಆರೋಗ್ಯ ಕಾಪಾಡುವುದು ನಾಗರಿಕರಾದ ನಮ್ಮೆಲ್ಲರ ಹೊಣೆಯೂ ಹೌದು ಎನ್ನುವುದನ್ನು ನಾವೇಕೆ ಮರೆತಿದ್ದೇವೆ.?

ಮಾಧ್ಯಮಗಳಲ್ಲಿ ಕೊರೊನಾ ವಿಸ್ತರಿಸುತ್ತಿರುವ ಬಗ್ಗೆ ನೋಡಿದರೆ ಒಂದು ಕ್ಷಣ ಹೃದಯದ ಬಡಿತ ಹೆಚ್ಚಾಗುತ್ತದೆ. ಅದೇ ಕ್ಷಣ ಸಾರ್ವಜನಿಕ ಸ್ಥಳಗಳಲ್ಲಿ ಜನಸಂದಣಿ ನೋಡಿದರೆ ದಿಗ್ಭ್ರಮೆ ಉಂಟಾಗುತ್ತದೆ. ಎತ್ತ ಸಾಗುತ್ತಿದ್ದೇವೆ ನಾವು ಎಂಬುದೇ ತಿಳಿಯುತ್ತಿಲ್ಲ. ಪರಿಸ್ಥಿತಿ ಎಷ್ಟು ಗಂಭೀರವಾಗಿದೆಯೆಂದರೆ ಕಳೆದ ಬಾರಿ ಕೊರೊನಾ ತನ್ನ ಕಬಂಧಬಾಹುಗಳನ್ನು ಚಾಚಿದಾಗ ಜನ ತತ್ತರಿಸಿ ಲಸಿಕೆ, ಔಷಧಿಗಳಿಗಾಗಿ ತಲ್ಲಣಿಸಿದರು.

ಸತತ ಪ್ರಯತ್ನಗಳಿಂದ ಲಸಿಕೆ ತಯಾರಾದ ಮೇಲೆ ಕೆಲವರು ನಿರಾಕರಿಸಿದರು ಕೂಡ. ಇದೀಗ ಅತ್ಯಂತ ಶೋಚನೀಯ ಸ್ಥಿತಿ ಉಂಟಾಗಿದೆ. ಇತ್ತ ಬೇಕೆಂದರೂ ಲಸಿಕೆ ಪೂರ್ಣಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಕೋವಿಡ್ ಸೋಂಕಿತರಿಗೆ ನೀಡಲಾಗುತ್ತಿರುವ ಇಂಜೆಕ್ಷನ್ ಕೂಡ ಪೂರ್ಣ ಪ್ರಮಾಣದಲ್ಲಿ ದೊರೆಯುತ್ತಿಲ್ಲ. ಹಾಗೆಯೇ ಉಸಿರಾಟದ ತೊಂದರೆಯಿಂದ ಬಳಲುತ್ತಿರುವ ಕೋವಿಡ್ ಸೋಂಕಿತರಿಗೆ ಆಮ್ಲಜನಕದ ಕೊರತೆಯೂ ಕೂಡ ದಿನೇ ದಿನೇ ಹೆಚ್ಚುತ್ತಿದೆ.

ಸದ್ಯದ ಪರಿಸ್ಥಿತಿಯಲ್ಲಿ ಕೋಟ್ಯಾಧೀಶ್ವರನೂ ಕೂಡ ಈ ಮೂರನ್ನು ಪಡೆದುಕೊಳ್ಳುವಲ್ಲಿ ವಿಫಲನಾಗುತ್ತಿದ್ದಾನೆ. ಸಾಲದ್ದಕ್ಕೆ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಬೆಡ್‌ಗಳ ಕೊರತೆ, ಶವಾಗಾರದಲ್ಲಿ ಶವಗಳಿಗೆ ಸ್ಥಳಾಭಾವ, ಮತ್ತೆ ಚಿತಾಗಾರದಲ್ಲಿ ಸಂಸ್ಕಾರಕ್ಕೆ ಗಂಟೆಗಟ್ಟಲೇ ದಿನಗಟ್ಟಲೇ ಶವವನ್ನು ಆಂಬ್ಯುಲೆನ್ಸ್‌ನಲ್ಲಿರಿಸಿಕೊಂಡು ಸರತಿ ಸಾಲಿನಲ್ಲಿ ನಿಲ್ಲಬೇಕಾಗಿದೆ.

ಇಂತಹ ಸ್ಥಿತಿಯಲ್ಲಿ ನಾವುಗಳು ಸೋಂಕಿನ ವಿರುದ್ಧ ಸರಿಯಾದ ಮುಂಜಾಗ್ರತೆ ವಹಿಸದೆ ನಿರ್ಲಕ್ಷ್ಯ ತೋರುವುದು ಸರಿಯೇ? ಒಮ್ಮೆ ಪ್ರತಿಯೊಬ್ಬರು ಆತ್ಮಾವಲೋಕನ ಮಾಡಿಕೊಳ್ಳೋಣ.

ಇನ್ನಾದರೂ ನಮ್ಮ ಮತ್ತು ನಮ್ಮವರ ಜೀವ ಸಂರಕ್ಷಣೆಗೆ ಸರಿಯಾದ ಮಾರ್ಗ ಸೂಚಿಗಳನ್ನು ಅನುಸರಿಸುವುದರ ಜೊತೆಗೆ ಸರ್ಕಾರಕ್ಕೆ ನಮ್ಮ ಬೆಂಬಲ ಸೂಚಿಸೋಣ.

**- ಸುನೀತಾ ಪ್ರಕಾಶ್**
ದಾವಣಗೆರೆ.

# ಮಹಾನಗರ ಪಾಲಿಕೆ 'ಪರಿಹಾರ' ಕ್ಕೆ ಬಂದ ದೂರುಗಳು 182

ದಾವಣಗೆರೆ, ಮೇ 1- ಸಾರ್ವಜನಿಕರಿಂದ ದೂರು ಸ್ವೀಕರಿಸಿ, ಸ್ಪಂದಿಸಲು ಆರಂಭಿಸಲಾಗಿದ್ದ ಮಹಾನಗರ ಪಾಲಿಕೆ 'ಪರಿಹಾರ' ಹೆಸರಿನಡಿ ತೆರೆಯಲಾಗಿದ್ದ 8277234444 ವಾಟ್ಸಾಪ್ ಸಂಖ್ಯೆಗೆ ಕಳೆದ ಮಾರ್ಚ್ 20 ರಿಂದ ಏಪ್ರಿಲ್ 20ರವರೆಗೆ 182 ದೂರುಗಳು ಸಲ್ಲಿಕೆಯಾಗಿವೆ.

ನೀರು, ಸ್ವಚ್ಛತೆ, ಬೀದಿ ದೀಪ ಸೇರಿದಂತೆ ಶೀಘ್ರ ಇತ್ಯರ್ಥಪಡಿಸಬಲ್ಲ ದೂರುಗಳಿಗೆ ಪಾಲಿಕೆ ತಕ್ಷಣವೇ ಸ್ಪಂದಿಸಿದೆ. ಆದರೆ ರಸ್ತೆ ನಿರ್ಮಾಣ, ಕಾಂಪೌಂಡ್ ನಿರ್ಮಾಣ ಸೇರಿದಂತೆ ಸಮಯ ತೆಗೆದುಕೊಳ್ಳ ಬಹುದಾದ ಸಮಸ್ಯೆಗಳನ್ನು ಆಯಾ ವಿಭಾಗಗಳಿಗೆ ವರ್ಗಾಯಿಸಲಾಗಿದೆ.

ಪರಿಹಾರಕ್ಕೆ ಬಂದ ದೂರುಗಳ ಪೈಕಿ ಅತಿ ಹೆಚ್ಚು ಅಂದರೆ 68 ದೂರುಗಳು ಕಸ, ಚರಂಡಿ ಸ್ವಚ್ಛತೆ, ಕಸದ ಗಾಡಿ ಬಗ್ಗೆ, ರಸ್ತೆ ಸ್ವಚ್ಛತೆ ಬಗ್ಗೆ ಬಂದಿದ್ದು, ದೂರುಗಳನ್ನು ಸ್ವೀಕರಿಸಿದ ಆರೋಗ್ಯ ಇಲಾಖೆ ಬಹುತೇಕ ಸಮಸ್ಯೆಗಳನ್ನು ಶೀಘ್ರದಲ್ಲೇ ಪರಿಹರಿಸಿ, ಸಾರ್ವಜನಿಕರಿಂದ ಮೆಚ್ಚುಗೆಯನ್ನೂ ಪಡೆಯುತ್ತಿದೆ.

ವಾಟರ್ ಟ್ಯಾಂಕ್, ಬೋರ್ ವೆಲ್ ನೀರಿನ ಬಗ್ಗೆ, ಛೇಂಬರ್ ಕ್ಲೀನ್, ರಸ್ತೆ ರಿಪೇರಿ, ನೀರಿನ ಪೈಪ್ ಒಡೆದಿರುವ ಬಗ್ಗೆ ಹಾಗೂ ಅಕ್ರಮವಾಗಿ ನಿರ್ಮಿಸಿರುವ ಮೆಟ್ಟಿಲು ಮತ್ತು ಸಜ್ಜ ತೆರವುಗೊಳಿಸುವ ಬಗ್ಗೆ 58 ದೂರುಗಳು ಬಂದಿದ್ದು ಪಾಲಿಕೆಯ ತಾಂತ್ರಿಕ ಶಾಖೆ ಸ್ಪಂದಿಸಿದೆ.



ಉಳಿದಂತೆ ಬೀದಿ ದೀಪ ದುರಸ್ತಿ ಬಗ್ಗೆ ವಿದ್ಯುತ್ ಶಾಖೆಗೆ 29 ದೂರುಗಳು ಬಂದರೆ, ಪಾರ್ಕ್ ಸ್ವಚ್ಛತೆ, ಫುಟ್ ಪಾತ್ ಮೇಲಿನ ಗಿಡಗಳ ರಕ್ಷಣೆ ಬಗ್ಗೆ ತೋಟಗಾರಿಕೆ ವಿಭಾಗಕ್ಕೆ 8 ದೂರುಗಳು ಮತ್ತು ಕಂದಾಯ ಶಾಖೆಗೆ ಸಂಬಂಧಿಸಿದಂತೆ ಕಂದಾಯ ಕಟ್ಟುವ ಬಗ್ಗೆ, ಖಾತಾ ಬದಲಾವಣೆ, ಮೊಬೈಲ್ ಟವರ್ ಹಾಕುವ ಬಗ್ಗೆ, ರಸ್ತೆ ಬದಿ ಶೆಡ್‌ಗಳನ್ನು ತೆರವುಗೊಳಿಸುವ ಕುರಿತು 9 ದೂರುಗಳು ಬಂದಿವೆ. ಹಂದಿ ಮರಿ ಹಾಕಿದ ಬಗ್ಗೆ, ಹಂದಿ, ನಾಯಿಗಳ ಕಾಟದ ಬಗ್ಗೆ 10 ದೂರುಗಳು ಬಂದಿವೆ.

ನೀರು, ಬೀದಿ ದೀಪ, ಸ್ವಚ್ಛತೆ, ರಸ್ತೆ ಹೀಗೆ ಮಹಾನಗರ ಪಾಲಿಕೆ ವ್ಯಾಪ್ತಿಯ ಜನತೆ ವಾಸಿಸಲು ಬೇಕಾದ ಮೂಲಸೌಕರ್ಯಗಳನ್ನು ಕಲ್ಪಿಸುವುದು ಪಾಲಿಕೆಯ ಪ್ರಮುಖ ಕರ್ತವ್ಯಗಳಲ್ಲೊಂದು. ಈ ಸವಲತ್ತುಗಳಲ್ಲಿ ಏನಾದರೂ ವ್ಯತ್ಯಯವಾದರೆ ದೂರು ಸ್ವೀಕರಿಸಲೆಂದೇ ಒಂದು ವಿಭಾಗವಿರುತ್ತದೆ. ಇತ್ತೀಚೆಗೆ ನೂತನ ಮೇಯರ್ ಎಸ್.ಟಿ. ವೀರೇಶ್ ಅವರು, ಮುಂದುವರೆದ ತಂತ್ರಜ್ಞಾನ ಬಳಸಿಕೊಂಡು ಸಾರ್ವಜನಿಕರ ದೂರುಗಳಿಗೆ ತ್ವರಿತವಾಗಿ ಸ್ಪಂದಿಸುವ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆ ಮುಂದೆ ಇಟ್ಟಿದ್ದರು.

**ಮೇಯರ್ ವೀರೇಶ್ ಅವರ ವಿನೂತನ ಪ್ರಯತ್ನಕ್ಕೆ ಉತ್ತಮ ಸ್ಪಂದನೆ**

ಇತ್ತೀಚೆಗೆ ಸಾಮಾಜಿಕ ಜಾಲ ತಾಣಗಳು ಅತ್ಯಂತ ಪ್ರಭಾವಿ ಮಾಧ್ಯಮಗಳಾಗಿದ್ದು, ಪ್ರತಿಯೊಬ್ಬರೂ ವಾಟ್ಸಾಪ್ ಬಳುಸುತ್ತಿದ್ದಾರೆ. ಹೀಗಾಗಿ ತಮ್ಮ ವಾರ್ಡ್‌ಗಳಲ್ಲಿನ ಸಮಸ್ಯೆಗಳನ್ನು ಚಿತ್ರ ಸಹಿತ ವಾಟ್ಸಾಪ್ ಸಂಖ್ಯೆಗೆ ಕಳುಹಿಸಿದರೆ ಸಂಬಂಧಿಸಿದ ವಿಭಾಗಕ್ಕೆ ದೂರೂ ವರ್ಗಾಯಿಸಿ, ಶೀಘ್ರ ಸಮಸ್ಯೆಗೆ ಸ್ಪಂದಿಸುವುದು ಮೇಯರ್ ಎಸ್.ಟಿ. ವೀರೇಶ್ ಅವರ ವಿನೂತನ ಪ್ರಯತ್ನವಾಗಿತ್ತು.

ಪರಿಹಾರ ವಾಟ್ಸಾಪ್ ಸಂಖ್ಯೆಗೆ ಬಂದ ದೂರುಗಳಿಗೆ ನಾವು ನಿರೀಕ್ಷಿಸಿದ ವೇಗದಲ್ಲಿ ಪಾರಿಹಾರ ಸಾಧ್ಯವಾಗದಿದ್ದರೂ ಆದಷ್ಟು ಶೀಘ್ರವಾಗಿ ಪರಿಹರಿಸಲು ಪ್ರಯತ್ನಿಸಲಾಗುತ್ತಿದೆ. ಹೊಸ ವ್ಯವಸ್ಥೆಗೆ ಹೊಂದಿಕೊಳ್ಳಲು ಸಿಬ್ಬಂದಿಗಳಿಗೂ ತುಸು ಕಾಲಾವಕಾಶ ಬೇಕು ಎನ್ನುತ್ತಾರೆ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿರುವ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್.

ನಿಟುವಳ್ಳಿ ಕರಿಯಮ್ಮ ದೇವಸ್ಥಾನದ ಬಳಿ ಕಳೆದ ಆರು ತಿಂಗಳಿನಿಂದ ಬೀದಿ ದೀಪ ಕೆಟ್ಟು ಹೋಗಿತ್ತು. ಈ ಬಗ್ಗೆ ಪರಿಹಾರ ವಾಟ್ಸಾಪ್ ಸಂಖ್ಯೆಗೆ ಫೋಟೋ ಸಹಿತ ದೂರು ನೀಡಿದ್ದೆ. ಅತ್ತ ಕಡೆಯಿಂದ ನೋಟೆಡ್ ಎಂಬ ಮೆಸೇಜ್ ಬಂದಿತ್ತು. ಎರಡು ದಿನಗಳ ನಂತರ ಬಂದು ಪರಿಶೀಲಿಸಿ ಪೂರ್ಣ ಸೆಟ್ ಬದಲಿಸಬೇಕು ಸದ್ಯ ಸ್ಟಾಕ್ ಇಲ್ಲವೆಂದು ಹೇಳಿ ತೆರಳಿದ್ದರು. ನಾನು ಮತ್ತೊಮ್ಮೆ ದೂರು ನೀಡಿದಾಗ ಬಂದು ರಿಪೇರಿ ಮಾಡಿದರು ಎಂದು ವಸಂತ ಕುಮಾರ್ ಪತ್ರಿಕೆಗೆ ತಿಳಿಸಿದರು.

ಅಂದಹಾಗೆ ವಾಟ್ಸಾಪ್ ಸಂಖ್ಯೆಗೆ ಬರುತ್ತಿರುವ ದೂರುಗಳ ಜೊತೆ ಈ ಹಿಂದೆ ಇದ್ದ ಲ್ಯಾಂಡ್ ಲೈನ್ ಸಂಖ್ಯೆಗೂ ನಿತ್ಯ ಹತ್ತಾರು ದೂರುಗಳು ಬರುತ್ತಿವೆ.

### ದೂರು ಸ್ವೀಕರಿಸಲು ಪಾಲಿಕೆಯಿಂದ ಆ್ಯಪ್



ತಂತ್ರಜ್ಞಾನವನ್ನು ಬಳಸಿಕೊಂಡು ಜನರ ಸಮಸ್ಯೆಗೆ ಶೀಘ್ರವಾಗಿ ಸ್ಪಂದಿಸುವ ಉದ್ದೇಶದಿಂದ ಪರಿಹಾರ ರೂಪಿಸಲಾಗಿತ್ತು. ಇದೀಗ ಪಾಲಿಕೆಯಿಂದ ನೂತನ ಆ್ಯಪ್ ರಚಿಸಲಾಗುವುದು. ಆ್ಯಪ್ ನಲ್ಲಿ ಮಾಹಿತಿ ನೀಡುವ, ದೂರು ಸ್ವೀಕರಿಸುವ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಹೇಳಿದರು.

ಪ್ರಸ್ತುತ ಇರುವ ಪಾಲಿಕೆ ವೆಬ್ ತಾಣದಲ್ಲೂ ಸಹ ದೂರು ಸಲ್ಲಿಸಲು ಅನುಕೂಲ ಕಲ್ಪಿಸಲಾಗುವುದು. ಆ ಮೂಲಕ ನಗರದ ಅಭಿವೃದ್ಧಿಗೆ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳಲಾಗುವುದು ಎಂದರು.

# ತವರೂರಿಗೆ ಮರಳಿದ ನಿವೃತ್ತ ಸೈನಿಕನಿಗೆ ಮೇಯರ್ ಸ್ವಾಗತ

ದಾವಣಗೆರೆ, ಮೇ 1- ಲಡಾಕ್ ಪ್ರಾಂತ್ಯದಿಂದ ನಿವೃತ್ತಿ ಹೊಂದಿ ತವರೂರಾದ ದಾವಣಗೆರೆಗೆ ಮರಳಿದ ಸೈನಿಕ ಸುಭೇದಾರ್ ರವಿಕುಮಾರ್ ಅವರನ್ನು ನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಇಂದು ಗೌರವಪೂರ್ವಕವಾಗಿ ಬರಮಾಡಿಕೊಂಡರು.

ನಗರದ ರೈಲ್ವೆ ನಿಲ್ದಾಣದಲ್ಲಿ ಬಂದಿಳಿದ ರವಿಕುಮಾರ್ ಅವರನ್ನು ಸನ್ಮಾನಿಸಿ, ತಮ್ಮ ಜೀವವನ್ನು ಪಣವಾಗಿಟ್ಟು ದೇಶ ರಕ್ಷಣೆಗೆ 25 ವರ್ಷಗಳ ಕಾಲ ಸಲ್ಲಿಸಿದ ಸೇವೆಯನ್ನು ಅಭಿನಂದಿಸಲಾಯಿತು.

ಇದೇ ವೇಳೆ ಮಾತನಾಡಿದ ಮೇಯರ್ ಎಸ್.ಟಿ. ವೀರೇಶ್, ನಮ್ಮ ಹಿಂಜಾವೇ ಸಂಘಟನೆಯಿಂದ ದೇಶ ಸೇವೆ ಸಲ್ಲಿಸಿ ಮರಳಿ ತವರೂರಿಗೆ ಬಂದ ಸೈನಿಕರನ್ನು ಗೌರವಪೂರ್ವಕವಾಗಿ ಸ್ವಾಗತಿಸುವ ಪದ್ಧತಿಯಂತೆ ಇಂದು ಸಹ ಸುಭೇದಾರ್ ರವಿಕುಮಾರ್ ಅವರನ್ನು ಸ್ವಾಗತಿಸಿರುವುದಾಗಿ ತಿಳಿಸಿದರು.



ದಾವಣಗೆರೆ ತಾಲ್ಲೂಕಿನ ಜರೀಕಟ್ಟೆ ಗ್ರಾಮದವರಾದ ರವಿಕುಮಾರ್ ಅವರು ದ್ವಿತೀಯ ಪಿಯುಸಿ ಪರೀಕ್ಷೆ ನಂತರ ಸೈನ್ಯಕ್ಕೆ ಸೇರಿ ದೇಶ ಸೇವೆ ಮಾಡಿದ್ದಾರೆ. ಹನ್ನೆರಡು ವರ್ಷ ಭಾರತ ಮತ್ತು ಪಾಕಿಸ್ತಾನದ ಗಡಿಯಲ್ಲಿ ಸೇವೆ ಮಾಡಿದ್ದಾರೆ. ಇತ್ತೀಚಿಗೆ ಲಡಾಕ್, ಚೈನಾ ವಿರುದ್ಧದ ಯುದ್ಧ ಸಂದರ್ಭದಲ್ಲಿ ಯುದ್ಧ ಸಾರಿದ್ದಾರೆ. ಅಪಾಯಕಾರಿ ಯುದ್ಧ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ.

ಸುಭೇದಾರ್ ಮೇಜರ್ ಆಗಿ ನಿವೃತ್ತಿ ಪಡೆದು ಮರಳಿ ತಮ್ಮೂರಿಗೆ ಬಂದಿರುವುದು ಜಿಲ್ಲೆಗೆ ಹೆಮ್ಮೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ನಿವೃತ್ತ ಸೈನಿಕ ರವಿಕುಮಾರ್ ಮಾತನಾಡಿ, 1996ರಲ್ಲಿ ಭಾರತೀಯ ಸೇನೆಯಲ್ಲಿ ಸಿಪಾಯಿಯಾಗಿ ಸೇವೆ ಪ್ರಾರಂಭಿಸಿದೆ. ಹೈದರಾಬಾದ್‌ನಲ್ಲಿ ತರಬೇತಿ ಪಡೆದು, ರಾಜಸ್ಥಾನದ ಅಜ್ಮೀರ್‌ನಲ್ಲಿ ಎರಡೂವರೆ ವರ್ಷ. ನಂತರ ಅಸ್ಸಾಂ, ಜಾರ್ಖಂಡ್ ರಾಂಚಿ, ಜಮ್ಮು, ಕಾಶ್ಮೀರ ಭಾಗ ಹೀಗೆ ವಿವಿಧ ಕಡೆ ಸೇವೆ ಸಲ್ಲಿಸಿದ ನಂತರ ಅಂತಿಮವಾಗಿ ಲಡಾಖ್ ನಲ್ಲಿ ಎರಡು ವರ್ಷಗಳ ಸೇವೆ ಮುಗಿಸಿ ಸುದೀರ್ಘ 25 ವರ್ಷ 3 ತಿಂಗಳ ದೇಶ ಸೇವೆ ಸಂಪನ್ನಗೊಂಡಿದೆ. ಸಿಪಾಯಿಯಾಗಿ ಸುಭೇದಾರ್ ವರೆಗಿನ ಸೇವೆ ಹೆಮ್ಮೆ ತಂದಿದೆ ಎಂದು ಅನುಭವದ ಜೊತೆ ಸಂತಸ ಹಂಚಿಕೊಂಡರು.

ಈ ವೇಳೆ ಪಾಲಿಕೆ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ. ಗೋಣೆಪ್ಪ ಸೇರಿದಂತೆ ಸೈನಿಕ ಕುಟುಂಬದವರು ಇದ್ದರು.

### ಸಂಕೋಳ್ ಮನೆಯಲ್ಲಿ ನಾರದಮುನಿ ಸಣ್ಣ ತೇರು



ದಾವಣಗೆರೆ, ಮೇ 1- ಹರಪನಹಳ್ಳಿ ತಾಲ್ಲೂಕು ಚಿಗಟೇರಿಯ ಇತಿಹಾಸ ಪ್ರಸಿದ್ಧ ಶ್ರೀ ನಾರದಮುನಿ ರಥೋತ್ಸವದ ಪ್ರಯುಕ್ತ ನಗರ ಪಾಲಿಕೆ ಮಾಜಿ ಸದಸ್ಯ ಶ್ಯಾಬನೂರಿನ ಸಂಕೋಳ್ ಚಂದ್ರಶೇಖರ್ ಅವರು ತಮ್ಮ ಮನೆಯಲ್ಲಿ ನಾರದಮುನಿ ಸ್ವಾಮಿಯ ಸಣ್ಣ ತೇರು ಎಳೆದು ಭಕ್ತಿ ಸಮರ್ಪಿಸಿದರು. ಕೊರೊನಾ ಹಿನ್ನೆಲೆಯಲ್ಲಿ ಚಿಗಟೇರಿಯಲ್ಲಿ ಶ್ರೀ ನಾರದಮುನಿ ರಥೋತ್ಸವವನ್ನು ರದ್ದುಪಡಿಸಲಾಗಿತ್ತು.

# ಜಗಳೂರು : ಕೋವಿಡ್ ಕೇರ್ ಸೆಂಟರ್‌ಗೆ ಎಸಿ ಭೇಟಿ



ಜಗಳೂರು, ಮೇ 1- ತಾಲ್ಲೂಕಿನ ಮೆದಗಿನಕೆರೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನಿರ್ಮಿಸಿರುವ ಕೋವಿಡ್ ಕೇರ್ ಸೆಂಟರ್‌ಗೆ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಇಂದು ಭೇಟಿ ನೀಡಿ ಪರಿಶೀಲಿಸಿದರು.

ನಂತರ ಮಾತನಾಡಿದ ಅವರು, ಶಾಸಕ ಎಸ್.ವಿ. ರಾಮಚಂದ್ರ ಅವರ ಸೂಚನೆಯಂತೆ ತಾಲ್ಲೂಕಿನಲ್ಲಿ ವಸತಿ ಶಾಲೆಯಲ್ಲಿ ಕೋವಿಡ್ ಕೇರ್ ಸೆಂಟರ್ ಆರಂಭಿಸಲಾಗಿದ್ದು ಸುಸಜ್ಜಿತ ಕಟ್ಟಡ, ಗಾಳಿ, ಬೆಳಕಿನ ವ್ಯವಸ್ಥೆ ಹೊಂದಿದ್ದು, 10 ಕೊಠಡಿಗಳಲ್ಲಿ 50 ಬೆಡ್ ಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಇದೀಗ 11 ಜನ ಕೋವಿಡ್ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರು.

ಬಿಸಿ ನೀರು ಹಾಗೂ ಶುದ್ಧ ಕುಡಿಯುವ ನೀರಿನ ಪೂರೈಕೆ ಮಾಡಲಾಗುತ್ತಿದೆ. ಪೌಷ್ಠಿಕಾಂಶಯುಕ್ತ ಗುಣಮಟ್ಟದ ಆಹಾರ ವಿತರಿಸಲಾಗುತ್ತಿದೆ. ಅಲ್ಲದೆ ಪ್ರತ್ಯೇಕ ಶೌಚಾಲಯ, ಕೋವಿಡ್ ಔಷಧಿ ಪರಿಕರ ಸಂಗ್ರಹಣಾ ಕೊಠಡಿ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಹೊಂದಿದೆ. ಚಿಕಿತ್ಸೆ ನೀಡಲು ವೈದ್ಯರು,ಸಿಬ್ಬಂದಿಗಳು ಹಾಗೂ ಉಸ್ತುವಾರಿಗಾಗಿ ಸಹಾಯಕ ನೋಡಲ್ ಅಧಿಕಾರಿ ಮತ್ತು ಸದಸ್ಯರ ತಂಡವನ್ನು ನಿಯೋಜಿಸಲಾಗಿದೆ. ಅಗತ್ಯವಿದ್ದರೆ ಪಕ್ಕದ ಕಟ್ಟಡದಲ್ಲಿ 50 ಬೆಡ್‌ಗಳ ಕೋವಿಡ್ ಕೇರ್ ಸೆಂಟರ್‌ಗೆ ಸಕಲ ಸಿದ್ಧತೆ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಡಾ. ನಾಗವೇಣಿ, ತಾ.ಪಂ. ಇಓ ಮಲ್ಲಾನಾಯ್ಕ, ಸಹಾಯಕ ನೋಡಲ್ ಅಧಿಕಾರಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್ವರಪ್ಪ, ಸದಸ್ಯ ಬಿಸಿಎಂ ಇಲಾಖೆಯ ನಿಲಯ ಮೇಲ್ವಿಚಾರಕ ದೇವೇಂದ್ರಪ್ಪ, ವಸತಿ ಶಾಲೆ ಪ್ರಾಂಶುಪಾಲೆ ರೂಪ, ವಿಜಯಕುಮಾರ್ ಸೇರಿದಂತೆ, ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಹರಿಹರ ತಾಲ್ಲೂಕಿನಲ್ಲಿ ಸೋಂಕಿತರ ಸಂಖ್ಯೆ ಏರಿಕೆ

ಮಲೇಬೆನ್ನೂರು, ಮೇ 1- ಪಟ್ಟಣದ 7ನೇ ವಾರ್ಡ್‌ನ ಜಟ್‌ಪಟ್ ನಗರದಲ್ಲಿ ವ್ಯಕ್ತಿಯೊಬ್ಬರಿಗೆ ಕೊರೊನಾ ಸೋಂಕು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಸೋಂಕಿತ ವ್ಯಕ್ತಿಯ ಪ್ರಥಮ ಹಾಗೂ ದ್ವಿತೀಯ ಸಂಪರ್ಕಿತರ ಗಂಟಲು ದ್ರವ ಪರೀಕ್ಷೆ ಮಾಡಲಾಯಿತು.

ಅಲ್ಲದೇ, ಹೊರಗಿನಿಂದ ಪಟ್ಟಣಕ್ಕೆ ಆಗಮಿಸಿರುವವರನ್ನು ಪತ್ತೆ ಮಾಡಿ, ಅವರನ್ನೂ ಟೆಸ್ಟ್ ಮಾಡಿ, ಹೋಂ ಕ್ವಾರಂಟೈನ್ ಮಾಡಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ದಿನಕರ್ ತಿಳಿಸಿದ್ದಾರೆ.

ಪುರಸಭೆ ಸದಸ್ಯ ಸುಬ್ಬಿ ರಾಜಪ್ಪ, ಪುರಸಭೆ ಅಧಿಕಾರಿಗಳಾದ ಉಮೇಶ್, ಗುರುಪ್ರಸಾದ್, ಪ್ರಭು ನವೀನ್ ಹಾಗೂ ಆರೋಗ್ಯ ಇಲಾಖೆಯವರು ಈ ವೇಳೆ ಹಾಜರಿದ್ದರು.

**ಏರಿಕೆ :** ಕಳೆದ 3-4 ದಿನಗಳಿಂದ ಹರಿಹರ ತಾಲ್ಲೂಕಿನಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದ್ದು, ಜನರು ಆತಂಕಗೊಂಡಿದ್ದಾರೆ. ಶುಕ್ರವಾರ 43 ಪಾಸಿಟಿವ್ ಕೇಸ್ ಪತ್ತೆಯಾಗಿದ್ದರೆ, ಶನಿವಾರ 53ಕ್ಕೆ ಏರಿಕೆ ಆಗಿದೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ತಾಲ್ಲೂಕಿನಲ್ಲಿ 214 ಸಕ್ರಿಯ ಕೊರೊನಾ ಕೇಸ್‌ಗಳಿದ್ದು, ಕೋವಿಡ್ -14 ಆರಂಭವಾದಾಗಿನಿಂದ ಇದುವರೆಗಿನ ಸೋಂಕಿತರ ಸಂಖ್ಯೆ 3281 ಆಗಿರುತ್ತದೆ. ಇದರಲ್ಲಿ ಪುರುಷರು 1860 ಮತ್ತು ಮಹಿಳೆಯರು 1392 ಇದ್ದಾರೆ. ನಗರದಲ್ಲಿ 1468 ಮತ್ತು ಗ್ರಾಮೀಣ ಪ್ರದೇಶದಲ್ಲಿ 1813 ಜನ ಸೋಂಕಿಗೆ ಒಳಗಾಗಿದ್ದಾರೆ ಎಂದು ಹೇಳಲಾಗಿದೆ.

# ಮಾವು ಬೆಳೆ ಬಂಜೆತನಕ್ಕೆ ಜಾರುತ್ತಿದೆ...

ಕಳೆದ 4-5 ವರ್ಷಗಳಿಂದ ಫಲ ಬಿಡದೆ ಮಾಮರಗಳು ಮುಷ್ಕರದಲ್ಲಿದ್ದಂತೆ ಕಾಣುತ್ತೆ. ಏಳು, ಎಂಟು ವರ್ಷಗಳಿಂದ ಸಕಾಲಿಕ ಮಳೆಯಾಗದೆ ಮರಗಳು ತಮ್ಮಲ್ಲಿಯ ಶಕ್ತಿ ಕಳೆದುಕೊಂಡು ಫಲ ಬಿಡುವ ಸ್ಥಿತಿಯಿಂದ ಬಹುದೂರ ಬಂದಿದೆ. ಕಳೆದ ವರ್ಷ ಅಲ್ಪಸ್ವಲ್ಪ ಬೆಳೆಯಾಗಿತ್ತು. ಕೋವಿಡ್ ಕಾರಣದಿಂದ ಬೆಳೆಗಾರ ಮತ್ತು ಮಾರಾಟಗಾರ ಇಬ್ಬರೂ ಸಹ ಅತಂತ್ರ ಸ್ಥಿತಿಯಲ್ಲಿದ್ದಾರೆ.



**ಅತಂತ್ರ ಸ್ಥಿತಿಯಲ್ಲಿ ರೈತ ಮತ್ತು ಕೇಣಿದಾರ**

ನಮ್ಮಲ್ಲಿ ಅತಿ ಹೆಚ್ಚು ಮಾವು ಬೆಳೆ ಬೆಳೆಯುವ ಗ್ರಾಮದ ರೈತರಿಗೆ ಮಾತಾಡಿಸಿದರೆ, ಕೋವಿಡ್ ಬದಲು ಸಾವು ಬಂದರೆ ಒಳಿತು. ಹಿಂಗಾರು ಮಳೆ ಚೆನ್ನಾಗಿದ್ದ ಕಾರಣ ಈ ವರ್ಷ ಒಳ್ಳೆಯ ಬೆಳೆ ಬರುತ್ತದೆ ಎಂಬ ನಿರೀಕ್ಷೆಯಿಂದ ಒಡಂಬಡಿಕೆ ಮಾಡಿಕೊಂಡಿದ್ದೆವು. ಕಳೆದ ವರ್ಷವೂ ಸಹ ಬೆಳೆಯಿಲ್ಲ. ಕೋವಿಡ್ ಕಾರಣ ಮಾರಾಟವಿಲ್ಲ ಎಂದು ರೈತನಿಗೆ ಅರ್ಧ ದುಡ್ಡು ಕೊಡುವಲ್ಲಿ ಭೂಮಿಯಾಕಾಶ ಒಂದು ಮಾಡಿದಷ್ಟು ಶ್ರಮವಾಯಿತು. ಈ ವರ್ಷ ಬರೀ 20 ಭಾಗದಷ್ಟು ಮಾತ್ರ ಬೆಳೆ ಬಂದಿರುವ ಸಂದರ್ಭದಲ್ಲಿ ಪುನಃ ಕೋವಿಡ್ ಹೆಚ್ಚಳದಿಂದ ಸಂಕಷ್ಟ ಎದುರಾಗಿದೆ.

ಸಂತೇಬೆನ್ನೂರು ಸುತ್ತಮುತ್ತಲ ರೈತರು ಸುಮಾರು 22 ಸಾವಿರ ಹೆಕ್ಟೇರ್‌ನಲ್ಲಿ ಮಾವು ಕೃಷಿ ಅಭಿವೃದ್ಧಿ ಪಡಿಸಿಕೊಂಡಿದ್ದರು. ಸರ್ಕಾರದ ಅನೇಕಾನೇಕ ಯೋಜನೆಗಳು ಚಾಲ್ತಿಯಲ್ಲಿದ್ದರೂ ಸಹ ತೋಟಗಾರಿಕೆ ಇಲಾಖೆಯಿಂದ ಧನಾತ್ಮಕ ಕಾರ್ಯನಿರ್ವಹಣೆ ಇಲ್ಲದೆ ರೈತರು ಕಂಗಾಲಾಗಿದ್ದಾರೆ. ಸುಮಾರು ನಾಲ್ಕೈದು ವರ್ಷಗಳಿಂದಲೂ ಸಹ ಮಾವು ಬೆಳೆಗಾರ ಬೆಳೆಯಿಲ್ಲದೆ, ಬೆಲೆಯೂ ಇಲ್ಲದೇ ಅಸ್ಥಿಪಂಜರದಂತಾಗುತ್ತಿದ್ದಾನೆ. ಇದಕ್ಕೆ ಪೂರಕವಾದ ಪರಿಹಾರ ಮತ್ತು ಮಾರ್ಗೋಪಾಯಗಳೇನು ಎಂಬುದನ್ನು ಸಂಬಂಧಪಟ್ಟ ಇಲಾಖೆ ಮಾಡದಿರುವುದು ಇಲಾಖೆಯ ನೈತಿಕತೆ, ಕಾರ್ಯ ವೈಖರಿಯ ಬಗ್ಗೆ ಪ್ರಶ್ನೆ ಏಳುವುದು ಸಹಜ. ವರ್ಷಕ್ಕೊಮ್ಮೆ ಗ್ಲಾಸ್‌ಹೌಸ್‌ನಲ್ಲಿ 'ಮಾವು ಮೇಳ' ಇಲಾಖೆ ಪ್ರಾಂಗಣದಲ್ಲಿ 'ಪುಷ್ಪ ಮೇಳ' ಮಾಡಿದರೆ ತೋಟಗಾರಿಕೆ ಇಲಾಖೆ ಕೆಲಸ ಮುಗಿಯಿತು.

ಹಿಂದೆರಡು ವರ್ಷಗಳಿಂದ ಶೈತ್ಯಾಗಾರಗಳನ್ನು ಅಲ್ಲಿ ನಿರ್ಮಿಸಲಾಗುತ್ತದೆ, ಇಲ್ಲಿ ನಿರ್ಮಿಸಲಾಗುತ್ತದೆ ಎಂದು ಚುನಾಯಿತ ಪ್ರತಿನಿಧಿಗಳು ಹೇಳಿಕೊಂಡಿದ್ದುಂಟು. ಆದರೆ ಇಲ್ಲಿಯವರೆಗೂ ಯಾವ ಕಾರ್ಯಗಳು ಆಗಿಲ್ಲ. ಶೈತ್ಯಾಗಾರಗಳು ನಿರ್ಮಿಸಿ ಕೊಟ್ಟಿದ್ದರೆ ಅವು ಇಂತಹ ಸಂದರ್ಭದಲ್ಲಿ ರೈತರಿಗೆ ಬೆನ್ನೆಲುಬಾಗಿ ನಿಲ್ಲುತ್ತಿದ್ದವು. ಧಾರಣೆ ಕುಸಿತ ಕಂಡಾಗಲೂ ಸಹ ಶೈತ್ಯಾಗಾರಗಳು ರೈತನ ಬೆಳೆಗೆ ಸೂಕ್ತ ಬೆಲೆ ನೀಡುವ ಗುರಾಣಿಯಾಗಿ ಕಾರ್ಯನಿರ್ವಹಿಸುತ್ತಿದ್ದವು ಎಂಬುದರಲ್ಲಿ ಸಂದೇಹವೇ ಇಲ್ಲ.

ಮಾವು ಬೆಳೆಯನ್ನು ರೈತ 6-7 ವರ್ಷ ನೀರೆರೆದು ಪ್ರತಿವರ್ಷ ಎಕರೆಗೆ 80 ಸಾವಿರದಿಂದ ಒಂದು ಲಕ್ಷ ಖರ್ಚು ಮಾಡಿ ಬೆಳೆಸುತ್ತಾನೆ . ಬಡವ 1 ಎಕರೆ ಎರಡು ಎಕರೆಯಲ್ಲಿ ಗಿಡನೆಟ್ಟು ಫಸಲಿಗೆ ಬಂದಾಗ ಬಂಜೆ ರೂಪ ನೋಡಿ ಕಂಗಾಲಾಗುತ್ತಿರುವುದಂತೂ ಸತ್ಯ.

ವಿಶ್ವಾಸವನ್ನು ಕಳೆದುಕೊಂಡು ಮಾವು ಬೆಳೆಗಾರ ಬರುಬರುತ್ತಾ ಆರ್ಥಿಕವಾಗಿ ತೀರ ಕೆಳ ಹಂತಕ್ಕೆ ತಲುಪಿದ್ದು, ಬೇರೆಯವರ ಅಡಿಕೆ ತೋಟ, ಗದ್ದೆಗಳಲ್ಲಿ ಕೂಲಿಗೆ ಕೇಳುವ ಸ್ಥಿತಿಗೆ ತಲುಪಿದ್ದಾನೆ. ಮಾವು ಬೆಳೆಗಾರರ ಬಗ್ಗೆ ಸರ್ಕಾರವಾಗಲಿ, ತೋಟಗಾರಿಕೆ ಇಲಾಖೆ ಅಧಿಕಾರಿ ವರ್ಗವಾಗಲೀ ಗಮನ ಹರಿಸಿ, ಮಾವು ಬೆಳೆಗೆ ಉತ್ತೇಜಿಸಬಹುದೇ ಎಂಬ ನಿರೀಕ್ಷೆ ನಮ್ಮದಾಗಿದೆ.

**- ಕೆ. ಸಿರಾಜ್ ಅಹಮ್ಮದ್**
ಸಂತೇಬೆನ್ನೂರು

# ಜಿಲ್ಲಾಸ್ಪತ್ರೆಗೆ ಡಿಸಿ ಅನಿರೀಕ್ಷಿತ ಭೇಟಿ



ದಾವಣಗೆರೆ, ಮೇ 1- ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಚಿಗಟೇರಿ ಜಿಲ್ಲಾಸ್ಪತ್ರೆಗೆ ಅನಿರೀಕ್ಷಿತವಾಗಿ ಇಂದು ಭೇಟಿ ನೀಡಿದರು. ಆಸ್ಪತ್ರೆಯ ಮೆಡಿಕಲ್ ಆಕ್ಸಿಜನ್ ಪ್ಲಾಂಟ್, ಎಂಐಸಿಯು ಯುನಿಟ್, ಐ.ಸಿ.ಯು. ವಾರ್ಡ್‌ಗಳಿಗೆ ಭೇಟಿ ನೀಡಿದ ಅವರು, ಆಕ್ಸಿಜನ್ ಅವಶ್ಯಕತೆ ಇಲ್ಲದವರನ್ನು ಜೆ.ಹೆಚ್.ಪಟೇಲ್ ಬಡಾವಣೆಯ ಕೋವಿಡ್ ಕೇರ್ ಸೆಂಟರ್‌ಗೆ ಕಳುಹಿಸಲು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

### ಸಾವಿನಲ್ಲಿ ಒಂದಾದ ತಂದೆ-ಮಗಳು

ದಾವಣಗೆರೆ, ಮೇ 1 – ಕೊರೊನಾದಿಂದ ಮಗಳು ಸಾವಿಗೀಡಾದ ಬೆನ್ನಲ್ಲೇ, ತಂದೆ ಹೃದಯಾಘಾತದಿಂದ ನಿಧನರಾದ ಹೃದಯ ವಿದ್ರಾವಕ ಘಟನೆ ನಡೆದಿದೆ. ನಗರದ ಶಿವಕುಮಾರಸ್ವಾಮಿ ಬಡಾವಣೆಯ ಮಂಜುನಾಥ್ ಹಾಗೂ ಮದುವೆಯಾದ ನಂತರ ಬೆಂಗಳೂರಿನಲ್ಲಿ ನೆಲೆಸಿರುವ ಪುತ್ರಿ ಕೆ.ಎ. ಪೂಜಾ ಸಾವನ್ನಪ್ಪಿದವರಾಗಿದ್ದಾರೆ.

ಪೂಜಾ ಕೊರೊನಾಗೆ ಸಿಲುಕಿ ಆಸ್ಪತ್ರೆಗೆ ದಾಖಲಾಗಿದ್ದರು. ಗುರುವಾರ ರಾತ್ರಿ 11 ಗಂಟೆಗೆ ಅವರು ನಿಧನರಾಗಿದ್ದಾರೆ. ಪುತ್ರಿಯ ಸಾವಿನ ಸುದ್ದಿ ತಂದೆಗೆ ತಿಳಿಸಿರಲಿಲ್ಲ. ಶುಕ್ರವಾರ ಬೆಳಗಿನ ಜಾವ 5 ಗಂಟೆ ಸುಮಾರಿನಲ್ಲಿ ತಂದೆ ಮಂಜುನಾಥ್ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಈ ಸಾವುಗಳು ಅವರ ಕುಟುಂಬ ಸದಸ್ಯರಿಗೆ ದೊಡ್ಡ ಆಘಾತ ತಂದಿವೆ. ಮಂಜುನಾಥ್, ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಕಳೆದ 30 ವರ್ಷಗಳಿಂದ ಬಸ್ ಏಜೆಂಟ್‌ರಾಗಿ ಕೆಲಸ ಮಾಡುತ್ತಿದ್ದರು.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte